
# ಸತ್ಯವೇದದ ಸುಗ್ಗಿಕಾಲಗಳು

## ಅಧ್ಯಯನ # 30



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 30

# ಸತ್ಯವೇದದ ಸುಗ್ಗೀಕಾಲಗಳು

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

**ಈ** ದಿನ ನಾವು ಸತ್ಯವೇದದಲ್ಲಿರುವ ಸುಗ್ಗಿ ಕಾಲಗಳ ಬಗ್ಗೆ ಅಭ್ಯಾಸ ಮಾಡೋಣ.

ಹೌದು! ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಮತ್ತಾಯ 13:39**

"…..ಸುಗ್ಗೀಕಾಲ ಎಂದರೆ ಲೋಕದ ಸಮಾಪ್ತಿ"(ಕೆ.ಜೆ.ವಿ.)

"…..ಸುಗ್ಗೀಕಾಲ ಎಂದರೆ ಯುಗದ ಸಮಾಪ್ತಿ" (ಎನ್.ಐ.ವಿ.)

**ಇದರ ಅರ್ಥವೇನು?**

**'ಸುಗ್ಗೀಕಾಲ' ಅಂದರೆ 'ಯುಗದ' ಅಥವಾ 'ಲೋಕದ' ಸಮಾಪ್ತಿ ಎನ್ನುವದರ ಅರ್ಥವೇನು?**

ಇದರ ಅರ್ಥ ಏನೆಂದರೆ ಪ್ರತಿ "ಯುಗದ' ಅಥವಾ "ಲೋಕದ' ಸಮಾಪ್ತಿಯಲ್ಲಿ ಸುಗ್ಗೀಕಾಲ ಇರಬೇಕು.

ನಾವು ನೆನಪಿನಲ್ಲಿಡಬೇಕಾದದ್ದೇನೆಂದರೆ "ಯುಗ" ಅಥವಾ "ಲೋಕವು" ಮನುಷ್ಯನಿಗಾಗಿ ದೇವರ ದೈವೀಕ ಯೋಜನೆಯಲ್ಲಿ ಇರುವ ಕಾಲವನ್ನು ಸೂಚಿಸುತ್ತದೆ!

**ಆದರೆ ಈ 'ಸುಗ್ಗೀಕಾಲ' ಎಂದರೇನು ?**

ನೇರವಾದ ಭಾಷೆಯಲ್ಲಿ ಸುಗ್ಗೀಕಾಲ ಎಂದರೆ ವ್ಯವಸಾಯ ಅಥವಾ ಕೃಷಿ ಮಾಡಿದ ಹೊಲದಲ್ಲಿ ಬೆಳೆದ
ಫಲಗಳನ್ನು ಶೇಕರಿಸುವ ಕೊನೆಯ ಕೆಲಸವನ್ನು ಸೂಚಿಸುತ್ತದೆ.



## ಸತ್ಯವೇದದಲ್ಲಿ ಕೃಷಿ ಅಥವಾ ವ್ಯವಸಾಯ ಎಂದರೇನು ?

ಆಹ್! ಈ ವಾಕ್ಯವು ನಿಜವಾದ ಕೃಷಿ ಅಥವಾ ವ್ಯವಸಾಯದ ಬಗ್ಗೆ ಸೂಚಿಸುತ್ತಿಲ್ಲ ಎಂದು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು!

ಸತ್ಯವೇದದ ದೃಷ್ಟಿಕೋಣದಲ್ಲಿ **"ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವದೂ ಆಗಿರುವ" (2 ತಿಮೋಥೆಯ 2:15)**
ಎಂಬ ವಾಕ್ಯದ ಪ್ರಕಾರ ಅದು ಅಭ್ಯಾಸಕ್ಕಾಗಿ ಯಾವ ಭಾಷೆಯಲ್ಲಿದೆ ಎಂದು ಸರಿಯಾಗಿ ಗುರುತಿಸಬೇಕು.

ಈ ವಾಕ್ಯವನ್ನು ನಾವು ಆ ಬೆಳಕಿನಲ್ಲಿ ಪರೀಕ್ಷಿಸುವಾಗ ಅದು ನೇರವಾದ ಭಾಷೆಯಲ್ಲಿ ಇಲ್ಲ ಆದರೆ ಸಾಂಕೇತಿಕ ಭಾಷೆಯಲ್ಲಿದೆ ಎಂದು ತಿಳಿಯುತ್ತದೆ.

**ಸತ್ಯವೇದದ ಬಹುತೇಕ ವಾಕ್ಯಗಳು ಸಾಂಕೇತಿಕ ಭಾಷೆಯಲ್ಲಿದೆ.**

ಇಲ್ಲಿ ಕೊಟ್ಟಿರುವ ಸಂಕೇತದ ಅರ್ಥವನ್ನು ತಿಳಿದುಕೊಳ್ಳಲು ಮೊದಲು ನಾವು ಈ ಸಂಕೇತದಿಂದಲೇ ಅದು ಏನೆಂದು ಕಲಿಯಬೇಕು.

- ವ್ಯವಸಾಯದಲ್ಲಿ "ಸುಗ್ಗಿಕಾಲ" ಎಂದರೆ ಹೊಲದಿಂದ ಫಲಗಳನ್ನು ಕೊಯ್ಯುವ ಕಾಲವನ್ನು ಸೂಚಿಸುತ್ತದೆ.

**ಇದು ಅಲ್ಲಿ ಮಾಡುವ ಕೊನೆಯ ಕೆಲಸವಾಗಿದೆ!**

ಆದರೆ ಈ ಸುಗ್ಗೀಕಾಲಕ್ಕೆ ಮುಂಚೆ ಬೆಳವಣಿಗೆಯ ವಿಧಾನಗಳಿರುತ್ತದೆ –

- ಮೊದಲನೆಯದಾಗಿ.....ಹೊಲವು ಅವಶ್ಯಕವಾಗಿದೆ.

ನಂತರ.... ಆ ನೆಲವು ಸಡಿಲವಾಗಿ ಮತ್ತು ಮೃದುವಾಗಿರಲು ಅದನ್ನು ಉಳಬೇಕು.

- ನಂತರ..... ಬೀಜಗಳನ್ನು ಬಿತ್ತುವ ಕೆಲಸಗಳಾಗಬೇಕು.
- ನಂತರ.... ಬೆಳವಣಿಗೆಯ ಕಾಲವಾಗಿರುತ್ತದೆ.

ಇದರಲ್ಲಿ ಮುಖ್ಯವಾಗಿ ಬೇಕಾಗಿರುವುದೇನೆಂದರೆ ನೀರು ಮತ್ತು ಸೂರ್ಯನ ಬೆಳಕು.

- ಕೊನೆಯದಾಗಿ.... ಕೆಲವುಕಾಲಗಳ ನಂತರ ಸುಗ್ಗೀಕಾಲವಿರುತ್ತದೆ.

ಇದರಲ್ಲಿ ಎಲ್ಲಾ ಫಲಗಳನ್ನು ಶೇಖರಿಸಲಾಗುತ್ತದೆ. ನಂತರ ಹೊಲವನ್ನು ಮುಂದಿನ ಬಿತ್ತನೆಗಾಗಿ ಸರಿಪಡಿಸಲಾಗುತ್ತದೆ.



**ಈ ರೀತಿಯಾದ ಕೃಷಿಯ ವೈಶಿಷ್ಟ್ಯಗಳನ್ನು ಸತ್ಯವೇದದಲ್ಲಿ.... ದೇವರ ಕೆಲಸಗಳನ್ನು ಆತನ ದೈವೀಕ ಯೋಜನೆಗಳಲ್ಲಿ ಬೇರೆ ಬೇರೆ ಕಾಲ (ಯುಗ)ಗಳಲ್ಲಿ ಸಾಂಕೇತಿಕವಾಗಿ ತೋರಿಸಲಾಗಿದೆ.**

ಈಗ ನಾವು ಇದು ಹೇಗೆ ಕೆಲಸ ಮಾಡುತ್ತದೆ ಮತ್ತು ಈ ವಿಷಯವನ್ನು ದೃಢಪಡಿಸಿಕೊಳ್ಳಲು ಕೆಳಗಿನ ವಾಕ್ಯವನ್ನು ಓದೋಣ–

## ಮತ್ತಾಯ 13:38

**"....ಹೊಲವೆಂದರೆ ಈ ಲೋಕ"**

ಆಹ್! ಹೌದು! ನಾವು ನೋಡುವುದೇನೆಂದರೆ ಈ ಲೋಕವು ದೇವರು ಉಳುಮೆ ಮಾಡುವ ಹೊಲವಾಗಿದೆ!!

ಆದರೆ ನಾವು ನೆನಪಿನಲ್ಲಿಡಬೇಕಾದದ್ದೇನೆಂದರೆ ರೈತರು ತಮ್ಮ ಇಡೀ ಹೊಲದಲ್ಲಿ ಒಂದೇ ವಿಧವಾದ ಬೀಜಗಳನ್ನು ಉಳುವ ಅವಶ್ಯವಿರುವುದಿಲ್ಲ.

ಕೆಲವರು ತಮ್ಮ ಉಳುಮೆಯನ್ನು ಒಂದು ಭಾಗದಲ್ಲಿ ಉಳುತ್ತಾರೆ, ಕೆಲವರು ಇನ್ನೊಂದು ಭಾಗದಲ್ಲಿ ಉಳುತ್ತಾರೆ.

ಇನ್ನೂ ಕೆಲವರು ತಮ್ಮ ನೆಲದ ಒಂದು ಭಾಗದಲ್ಲಿ ಮಾತ್ರ ಉಳುತ್ತಾರೆ. ಆದರೆ ಉಳಿದ ಜಾಗವನ್ನು ಹಾಗೆಯೇ ಉಳದೆ ಬಿಟ್ಟುಬಿಡುತ್ತಾರೆ.

**ಅದು ಆ ರೈತರ ಇಷ್ಟ!**

ದೇವರು ಮತ್ತು.......... ಆತನ ದೈವೀಕ ಯೋಜನೆಗಳು ಹಾಗೆಯೇ ಇದೆ!!

ದೇವರು ಸಹ ಬೇರೆ ಬೇರೆ ಕಾಲಗಳಲ್ಲಿ ತನ್ನ ನಿರ್ಧಿಷ್ಟವಾದ ಕೆಲಸಗಳನ್ನು ಮಾಡುತ್ತಿದ್ದಾನೆ. ಇದನ್ನು "ಯುಗಗಳು" ಅಥವಾ "ಲೋಕಗಳು" ಎಂದು ಕರೆಯಲಾಗುತ್ತದೆ.

## ದೇವರು ಯಾವ "ಕೆಲಸಗಳನ್ನು" ಮಾಡುತ್ತಿದ್ದಾನೆಂದು ನಮಗೆ ಹೇಗೆ ಗೊತ್ತಾಗುತ್ತದೆ?

ಈ ಸುಗ್ಗೀಕಾಲದ ವಿಚಾರದಿಂದ ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ.

**ಸತ್ಯವೇದದಲ್ಲಿ ಮೂರು ಸುಗ್ಗೀಕಾಲಗಳು ದಾಖಲಾಗಿದೆ!**

ಅವು ಯಾವುದೆಂದರೆ –

## ಯೆಹೂದ್ಯ ಯುಗದ ಸುಗ್ಗೀಕಾಲ

.....ಇಲ್ಲಿ ಉಪಯೋಗಿಸಿರುವ ಸಂಕೇತ ಯಾವುದೆಂದರೆ "ಗೋಧಿ" ಮತ್ತು "ಹೊಟ್ಟು"

## ಸುವಾರ್ತಾ ಯುಗದ ಸುಗ್ಗೀಕಾಲ

.....ಇಲ್ಲಿ ಉಪಯೋಗಿಸಿರುವ ಸಂಕೇತ ಯಾವುದೆಂದರೆ "ಗೋಧಿ" ಮತ್ತು "ಹಣಜಿ"

## ಸಾವಿರ ವರ್ಷಗಳ ಯುಗದ ಸುಗ್ಗೀಕಾಲ

.....ಇಲ್ಲಿ ಉಪಯೋಗಿಸಿರುವ ಸಂಕೇತ ಯಾವುದೆಂದರೆ "ಕುರಿಗಳು" ಮತ್ತು "ಆಡುಗಳು".


**ಇಲ್ಲಿ ಉಪಯೋಗಿಸಿರುವ ಎರಡು ಸಂಕೇತಗಳು ಪ್ರತೀ ಸುಗ್ಗೀಕಾಲದಲ್ಲಿನ ಆಯಾ ಕಾಲ ಮತ್ತು ಕೆಲಸದಲ್ಲಿ ಉಂಟಾಗುವ ಫಲಗಳು ಮತ್ತು ಕಸಗಳನ್ನು ಸೂಚಿಸುತ್ತದೆ.**

ಈಗ ನಾವು ಒಂದೊಂದಾಗಿ ಈ ಸುಗ್ಗೀಕಾಲಗಳನ್ನು ವಿವರವಾಗಿ ಮತ್ತು ಆಳವಾಗಿ ಅಭ್ಯಾಸ ಮಾಡುತ್ತಾ ಅರ್ಥಮಾಡಿಕೊಳ್ಳೋಣ.

ಮೊದಲನೆಯದಾಗಿ ನಾವು ಕೆಳಗಿನ ಸುಗ್ಗೀಕಾಲವನ್ನು ಅಭ್ಯಾಸ ಮಾಡೋಣ –

# ಯೆಹೂದ್ಯ ಯುಗದ ಸುಗ್ಗೀಕಾಲ.

ಈ ಕಾಲದಲ್ಲಿನ ನೆಲ ಅಥವಾ ಹೊಲ ಯಾವುದೆಂದರೆ → **ಇಸ್ರಾಯೇಲ್ ದೇಶ**



ಈ "ಸುಗ್ಗೀ ಕಾಲವು" **"ಗೋಧಿ"** ಮತ್ತು **"ಹೊಟ್ಟು"**
ಇವುಗಳನ್ನು ಬೇರ್ಪಡಿಸುವ ಕಾಲವಾಗಿದೆ.

## ಇದರ ಅರ್ಥವೇನು?

ಸತ್ಯವೇದದಲ್ಲಿ ಈ "ಸುಗ್ಗೀಕಾಲ"ವನ್ನು ಕುರಿತು ದಾಖಲಾಗಿರುವದನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

## ಮತ್ತಾಯ 3:11,12

**"ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು."**

ಹೌದು! ಇಲ್ಲಿ ಯೇಸು ಪ್ರಧಾನ ಕೊಯ್ಯುವವನಾಗಿ "ಗೋದಿ" ಮತ್ತು "ಹೊಟ್ಟು" ಇವುಗಳನ್ನು ಬೇರ್ಪಡಿಸುವ ಕೆಲಸವನ್ನು ಮಾಡುತ್ತಾನೆ ಎಂದು ವಾಕ್ಯವು ಹೇಳುತ್ತದೆ.

## 'ಹೊಟ್ಟು' ಎಂದರೆ ಅರ್ಥವೇನು?

ಇದು ಗೋಧಿಯ **ಹೊರಗಿನ ಹೊದಿಕೆಯಾಗಿದ್ದು** ಅದರೊಳಗೆ **ಯಾವುದೇ** ಗೋಧಿಯಿರದೆ **ಖಾಲಿ** ಸಿಪ್ಪೆಯಿದ್ದು ಬಹಳ **ಹಗುರವಾಗಿರುತ್ತದೆ.**

ಹೌದು! **"ಹೊಟ್ಟು"** ಎಂದರೆ **ಹೊರನೋಟಕ್ಕೆ** ಅದು ಗೋಧಿಯಂತೆ ಕಂಡರೂ ಅದರೊಳಗೆ **ಯಾವುದೇ ಫಲವಿರುವುದಿಲ್ಲ!**

ಆದರೆ ಗೋಧಿ ಒಳಗೆ ಮತ್ತು ಹೊರಗೆ .......ಎರಡೂ ಕಡೆಯಲ್ಲೂ ಗೋಧಿ ಇರುತ್ತದೆ!






## ಈ ಎರಡೂ ಸಂಕೇತಗಳು ಯೆಹೂದ್ಯ ದೇಶದಲ್ಲಿ ಏನ್ನನ್ನು ಸೂಚಿಸುತ್ತದೆ?

ನಾವು ಸಂಕೇತಗಳಲ್ಲಿ ನೋಡಿದಂತೆ “ಗೋದಿ”ಯು ಹೊರಗಡೆ ಮಾತ್ರವಲ್ಲದೆ ಒಳಗಿನಿಂದಲೂ "ಗೋಧಿ"ಯಾಗಿದೆ.

ಇದೇ "ನಿಜವಾದ ಇಸ್ರಾಯೇಲ್ಯರ’ ಚಿತ್ರಣವಾಗಿದೆ.

ಇಂತಹ ಇಸ್ರಾಯೇಲ್ಯನ ಉದಾಹರಣೆಯನ್ನು ಕುರಿತು ನೋಡೋಣ –

**ಯೋಹಾನ 1:47**

**“ಯೇಸು ತನ್ನ ಕಡೆಗೆ ಬರುವ ನತಾನಯೇಲನನ್ನು ಕಂಡು ಅವನ ವಿಷಯವಾಗಿ – ಇಗೋ ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ ಅಂದನು.”**



ಹೌದು! ಯೇಸು ನತಾನಯೇಲನನ್ನು ಕಂಡು ಆತನು "ನಿಜವಾದ ಇಸ್ರಾಯೇಲನು" ಎಂದು ಗುರುತಿಸಿದನು ಅಥವಾ ಆತನು ಒಬ್ಬ ಇಸ್ರಾಯೇಲನಾಗಿದ್ದು

......ಹೊರಗಡೆಗೂ (ಅಂದರೆ, ಧರ್ಮಶಾಸ್ತ್ರದ ಪದ್ಧತಿ ಮತ್ತು ಆಚರಣೆಗಳು)

......ಇದಲ್ಲದೆ ಒಳಗಿನಿಂದಲೂ (ಅಂದರೆ, ಹೃದಯದಲ್ಲಿಯೂ)

**ಹೌದು! ಆತನು ಗೋಧಿಗೆ ಉದಾಹರಣೆಯಾಗಿದ್ದನು!**

ಈಗ "ಹೊಟ್ಟು" ಎಂದರೆ, ಹೊರಗಡೆ ಮಾತ್ರ (ಧರ್ಮಶಾಸ್ತ್ರದ ಪದ್ಧತಿ ಮತ್ತು ಆಚರಣೆಗಳನ್ನು ಅನುಸರಿಸುವವರಾಗಿದ್ದು)
ಆದರೆ ಒಳಗಡೆ (ಹೃದಯದಲ್ಲಿ), (ಏನು ಇಲ್ಲದವರು) ಖಾಲಿಯಾಗಿರುತ್ತಾರೆ.

**ಹೌದು! ಹೊರನೋಟಕ್ಕೆ ಅವರು ಯೆಹೂದ್ಯರಂತೆ ಭಾವನೆಯನ್ನು ತೋರಿಸುತ್ತಾರೆ ಆದರೆ "ಹೃದಯದಲ್ಲಿ" ಅವರು ದೇವರ ವಾಗ್ಧಾನಗಳ ಮೇಲೆ ನಂಬಿಕೆಯೇ ಇಲ್ಲದ ಯೆಹೂದ್ಯರಂತಿದ್ದಾರೆ**

ಆಶ್ಚರ್ಯವೇನೆಂದರೆ ಬಹುಭಾಗದ ಧಾರ್ಮಿಕ ನಾಯಕರು ಮತ್ತು ಬೋಧಕರು ಈ ವರ್ಗಕ್ಕೆ ಸೇರಿದವರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಮತ್ತಾಯ 23:13**

**"ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ, ಪರಿಸಾಯರೇ, ಪರಲೋಕ ರಾಜ್ಯದ ಬಾಗಿಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ; ನೀವಂತೂ ಒಳಕ್ಕೆ ಹೋಗುವುದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗಗೊಡಿಸುವದಿಲ್ಲ."**

ಹೌದು! ನಿಜವಾಗಿಯೂ, ಇವರನ್ನು "ಹೊಟ್ಟು" ಎಂಬ ಸಂಕೇತಕ್ಕೆ ಇಲ್ಲಿ ಹೋಲಿಸಲಾಗಿದೆ.

ಆದ್ದರಿಂದ, ಇಸ್ರಾಯೇಲಿನಲ್ಲಿ ಎರಡು ವಿಧವಾದ ಯೆಹೂದ್ಯರನ್ನು "ಗೋಧಿ" ಮತ್ತು "ಹೊಟ್ಟು" ಇವುಗಳನ್ನು ಸೂಚಿಸುತ್ತದೆ ಎಂದು ನೋಡಿದ್ದೇವೆ.

ಈಗ ಯೇಸುವಿನ ಮೊದಲನೆಯ ಬರುವಿಕೆಯಲ್ಲಿ "ಹೊಲ"ವೆಂಬ ಇಸ್ರಾಯೇಲ್ ದೇಶವು ಸುಗ್ಗೀಕಾಲಕ್ಕೆ "ಹಣ್ಣಾಗಿದೆ" ಎಂದು ಆತನ ಈ ಕೆಳಗಿನ ವಾಕ್ಯದಲ್ಲಿ ಅರ್ಥಮಾಡಿಕೊಳ್ಳುತ್ತೇವೆ.

**ಯೋಹಾನ 4:35,36**

**"ಇನ್ನು ನಾಲ್ಕು ತಿಂಗಳಿಗೆ ಸುಗ್ಗಿಬರುವದೆಂದು ನೀವು ಹೇಳುವದುಂಟಷ್ಟೆ. ನಿಮ್ಮ ಕಣ್ಣೆತ್ತಿ**

**ಹೊಲಗಳನ್ನು ನೋಡಿರಿ;**
**ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ.........."**

ಆಹ್! ಹೌದು! ಅನೇಕರು ಯೇಸುವಿನ ಈ ವಾಕ್ಯದ ಅರ್ಥವನ್ನು ಕುರಿತು ಆಶ್ಚರ್ಯಪಟ್ಟಿದ್ದಾರೆ!

ಏಕೆ ಯೇಸು ಇಸ್ರಾಯೇಲ್ಯದ ಹೊಲದಲ್ಲಿ ವ್ಯವಸಾಯವನ್ನು ಕುರಿತು ಮಾತನಾಡುತ್ತಿದ್ದಾನೆಂದು ಆಶ್ಚರ್ಯಪಟ್ಟಿದ್ದಾರೆ!

**ಆತನು ವ್ಯವಸಾಯ ಮನಸ್ಸುಳ್ಳವನಾಗಿದ್ದನೋ?**

**ಆದರೆ, ನಿಜವಾಗಿಯೂ ಯೆಹೂದ್ಯ ಯುಗದಲ್ಲಿನ ದೇವರ ಕೊನೆಯ ಕೆಲಸವನ್ನು ಕುರಿತು ಯೇಸು ಇಲ್ಲಿ ಸೂಚಿಸಿದ್ದಾನೆಂದು ಈ ದಿನ ನಮಗೆ ಅರ್ಥವಾಗಿದೆ!!**

**ಹಾಗಾದರೆ ಈ ಹೊಲದಲ್ಲಿ ಯಾರು ' ಬೀಜ'ಗಳನ್ನು ಬಿತ್ತಿದ್ದಾರೆ?**

**ಮತ್ತು ಆ 'ಬೀಜಗಳು' ಎಂದರೆ ಯಾವುದು?**

**ಮತ್ತು ಅವರು ಮಾಡಿದ 'ಉಳುಮೆ' ಕೆಲಸ ಎಂದರೇನು ?**

ಕೆಳಗಿನ ವಾಕ್ಯದಲ್ಲಿ ಇದಕ್ಕೆ ಉತ್ತರವು ದಾಖಲಾಗಿರುವದನ್ನು ಓದುತ್ತೇವೆ

## ಯೋಹಾನ 4:38


**"ನೀವು ಕಷ್ಟಮಾಡದಂಥ ಬೆಳೆಯನ್ನು ಕೊಯ್ಯುವದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು; ಬೇರೊಬ್ಬರು ಕಷ್ಟಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ ಎಂದು ಹೇಳಿದನು."**

ಇಲ್ಲಿ "ಬೇರೊಬ್ಬರು" ಅಂದರೆ ಪ್ರವಾದಿಗಳು ಮತ್ತು ಪರಿಶುದ್ಧ ದೇವ ಮನುಷ್ಯರು. ಇವರು ಪ್ರವಾದನೆಗಳು ಮತ್ತುವಾಗ್ದಾನಗಳುಎಂಬ "ಬೀಜ'ಗಳನ್ನು ಬಿತ್ತಿ ಇಸ್ರಾಯೇಲಿನಲ್ಲಿ ಬರಬೇಕಾದ ಮೆಸ್ಸೀಯನನ್ನು ಕುರಿತು ಮತ್ತು ದೇವರ ರಾಜ್ಯದಲ್ಲಿ ಇಸ್ರಾಯೇಲ್ ದೇಶವು ದೇವರ ಆಶೀರ್ವಾದದ ಸಾಧನವಾಗಿರುವದೆಂದು ತಿಳಿಸಿದರು!!

**'ಉಳುಮೆ'ಯನ್ನು ಕುರಿತು ಏನು ನೋಡುತ್ತೇವೆ?**

**'ಉಳುಮೆ' ಎಂದರೇನು ?**

(ಗಟ್ಟಿಯಾದ) ಹೊರಟಾದ ನೆಲವನ್ನು ನೇಗಿಲು ಎಂಬ ಚೂಪಾದ ಸಾಧನದಿಂದ ಹರಿದು ಬಿಟ್ಟು ಆ ಮಣ್ಣನ್ನು
ಹಗುರಮಾಡಲಾಗುತ್ತದೆ. ಆ ನಂತರ ಬೀಜಗಳನ್ನು ಬಿತ್ತುವದಕ್ಕೆ ಆ ನೆಲವು ಸಿದ್ಧವಾಗಿರುತ್ತದೆ!



ಇಡೀ ಇಸ್ರಾಯೇಲ್ ದೇಶವು ಮೊದಲೇ ಐಗುಪ್ತ್ಯದಲ್ಲಿ ಗುಲಾಮರಾಗಿ ಮತ್ತು ಬಂಧನದ ಅನುಭವಗಳಿಂದ ಬೀಜಗಳೆಂಬ ದೇವರ ವಾಕ್ಯಗಳನ್ನು "ಉಳುಮೆ" ಮಾಡಿದ್ದಾರೆ ಅಥವಾ ತಯಾರಾಗಿದ್ದಾರೆ!!

ಇದೇ ಇಸ್ರಾಯೇಲ್ಯರ "ಮಣ್ಣು" ಅಥವಾ ಹೃದಯಗಳು "ಉಳುಮೆ"ಯ ಅನುಭವಗಳಾಗಿರುತ್ತದೆ.

## ಇದಾದ ನಂತರ, ಏನು ಕೆಲಸ ನಡೆಯ ಬೇಕಾಗಿರುತ್ತದೆ?

ಇದಾದ ನಂತರ, ಯೆಹೂದ್ಯ ಯುಗದ ಕಾಲದಲ್ಲಿ ಈ “ಬೀಜಗಳು” ಬೆಳೆದು ಇಸ್ರಾಯೇಲ್ಯರು “ಸೂರ್ಯನ ಬೆಳಕೆಂಬ”
ದೇವರ ದೈವೀಕ ರಕ್ಷಣೆ ಮತ್ತು ಅನುಗ್ರಹ ಮತ್ತು ಬಿಡುಗಡೆಯನ್ನು ಅವರ ಇತಿಹಾಸ ಕಾಲಗಳಲ್ಲಿ ಹೊಂದಿದರು.

ನಂತರ ಅವರು ನಿಯಮಿತವಾಗಿ "ನೀರು" ಎಂಬ ದೇವರ ವಾಕ್ಯಗಳನ್ನು ಯೆಶಾಯ ಪ್ರವಾದಿಯಿಂದ ಮಲಾಕಿಯ ಪ್ರವಾದಿಯವರೆಗೂ, ಅವರ ಬಾಯಿಯ ಮೂಲಕ ಬೋಧನೆ, ಎಚ್ಚರಿಕೆ ಮತ್ತು ಉತ್ತೇಜನವನ್ನು ಹೊಂದಿದರು.

ಆದ್ದರಿಂದ "ಸೂರ್ಯನ ಬೆಳಕು" ಮತ್ತು "ನೀರು"ಗಳನ್ನು ಅವರ ಸರಿಯಾದ ಬೆಳವಣಿಗೆಗೆ ಒದಗಿಸಲಾಗುತ್ತಿತ್ತು!!

ಆದ್ದರಿಂದ, ಆ ಸಮಯ "ಸುಗ್ಗೀಕಾಲ" ವಾಗಿದ್ದರಿಂದ ಪ್ರಧಾನ "ಕೊಯ್ಯುವವ"ನಾದ ಯೇಸು ಆ ಸಮಯದಲ್ಲಿ ಇಸ್ರಾಯೇಲ್ ದೇಶದಲ್ಲಿದ್ದನು!



**ಈಗ ಈ 'ಸುಗ್ಗೀಕಾಲ'ವನ್ನು ಹೇಗೆ ಮಾಡಬೇಕಿತ್ತು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 3:12**

**"ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು."**

**ಯೇಸುವಿನ ಕೈಯಲ್ಲಿರುವ 'ಮೊರ' ಇದರ ಅರ್ಥವೇನು?**

ಹೇಗೆ "ಮೊರ"ವನ್ನು ಹಿಡಿದಾಗ "ಗೋಧಿ" ಮತ್ತು "ಹೊಟ್ಟು" ಗಾಳಿ ಬೀಸುವಾಗ ಅದು ಬೇರೆ ಬೇರೆಯಾಗಿ, ಹಗುರವಾಗಿರುವ "ಹೊಟ್ಟು" ಭಾರವಾದ ಗೋಧಿಯಿಂದ ಬೇರೆಯಾಗಿ ಹಾರಿ ಹೋಗುತ್ತದೋ,ಹಾಗೆಯೇ ಸತ್ಯವಾಕ್ಯಗಳನ್ನು ಮಾತನಾಡಿದ ಯೇಸುವಿನ ಮಾತಿನಿಂದ ಅದೇ ಪರಿಣಾಮ ಬೀರುತ್ತದೆ. ಇಸ್ರಾಯೇಲಿನ ಯೆಹೂದ್ಯರಲ್ಲಿ "ಗೋಧಿ" ಅಥವಾ ನಿಜವಾದ ಇಸ್ರಾಯೇಲ್ಯರು ಮಾತ್ರ ಆತನ ಮಾತನ್ನು ಕೇಳುವರು.

ಮತ್ತು ಆತನ **"ಕೃಪೆಯೂ ಸತ್ಯವೂ"** ಉಳ್ಳ **(ಯೋಹಾನ 1:17)**



...........ವಾಕ್ಯವನ್ನು ಕೇಳುವರು. ಹಾಗು ಬೇರೆ ಎಲ್ಲವನ್ನು ಬಿಟ್ಟು ಆತನನ್ನು ಹಿಂಬಾಲಿಸುವರು ಮತ್ತು ಆತನ ಶಿಷ್ಯರಾಗಿ ಆತನೊಂದಿಗೆ ನೆಲೆಸಿರುವರು.

## ಇವರೇ "ಗೋಧಿ" ವರ್ಗದವರು!

### ಮತ್ತು 'ಹೊಟ್ಟಿನ' ಬಗ್ಗೆ ಏನನ್ನು ನೋಡುತ್ತೇವೆ?

ಉಳಿದ ಇಸ್ರಾಯೇಲ್ ಜನರು ಯೇಸುವನ್ನು ಮತ್ತು ಆತನ ಸತ್ಯವಾಕ್ಯವನ್ನು ನಿರಾಕರಿಸಿದರು.

ಇದರಿಂದ ಅವರು "ನಿಜವಾದ ಇಸ್ರಾಯೇಲ್ಯರಲ್ಲ" ಆದರೆ ಹೊರಗಡೆಗೆ ಮಾತ್ರ

ಇಸ್ರಾಯೇಲ್ಯರೆಂದು ಸಾಬೀತು ಪಡಿಸಿದರು!!
ಹೌದು! ಇವರು ಹೆಸರಿಗೆ ಮಾತ್ರ..... ಇಸ್ರಾಯೇಲ್ಯರಾಗಿದ್ದರು!

## ಇವರೇ "ಹೊಟ್ಟ"ನ ವರ್ಗದವರು!

### ಈ ಸುಗ್ಗೀಕಾಲದಲ್ಲಿ 'ಗೋಧಿ' ಮತ್ತು 'ಹೊಟ್ಟು'ಗಳಿಗೆ ಏನಾಯಿತು?

ಈಗ ಮತ್ತೆ ಕೆಳಗಿನ ವಾಕ್ಯದಲ್ಲಿ ಓದೋಣ –

**ಮತ್ತಾಯ 3:12**

**"ತನ್ನ ಗೋಧಿಯನ್ನು ಕಣಜದಲ್ಲಿ ತುಂಬಿಕೊಂಡು." (ಎನ್.ಐ.ವಿ)**



ಇಸ್ರಾಯೇಲ್ಯರಲ್ಲಿ "ಗೋಧಿ" ವರ್ಗಕ್ಕೆ ಸೇರಿದವರನ್ನು ಬೇರ್ಪಡಿಸಿ ಅವರನ್ನು "ನಿಜವಾದ ಇಸ್ರಾಯೇಲ್ಯರು"ಎಂದು ಕರೆದನು.ಮತ್ತು ಅವರನ್ನು ಕಣಜದಲ್ಲಿ ತುಂಬಿಸಿದನು." ಇವರೇ ಮೊಟ್ಟ ಮೊದಲ ಭಾರಿ ಕರೆಯಲ್ಪಟ್ಟ ಯೇಸು ಕ್ರಿಸ್ತ ಸಭೆಯೊಳಗೆ ಸೇರಿದ ಯೆಹೂದ್ಯರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ರೋಮಾಪುರದವರಿಗೆ 2:9,10**

**".....ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ....."**

ಮತ್ತು ನಿಜವಾಗಿಯೂ ಮೊದಲ ಅಂಗಗಳಾದ ಯೇಸು ಕ್ರಿಸ್ತನ ಸಭೆಯು ಯೆಹೂದ್ಯದವರಾಗಿದ್ದರು.

**ಎಲ್ಲಾ ಹನ್ನೆರಡು ಅಪೋಸ್ತಲರು ಯೆಹೂದ್ಯದವರಾಗಿದ್ದರು!**

ಮತ್ತು ಪಂಚಶತ್ತಮ ದಿನದಂದು ಮೊದ ಮೊದಲು "ನಂಬಿದವರೆಲ್ಲರೂ" ಯೆಹೂದ್ಯರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 2:41**

**"ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು."**

ಮತ್ತು ಈ ಸಂಖ್ಯೆಯು "ಐದುಸಾವಿರಕ್ಕೆ" ಏರಿತು ಎಂದು ಅಪೋಸ್ತಲರ **ಕೃತ್ಯಗಳು 4:4**ರಲ್ಲಿ ಓದುತ್ತೇವೆ.

ಹೌದು! "ಕಣಜ"ದಲ್ಲಿ ತುಂಬಿದ ನಿಜವಾದ "ಗೋಧಿ" ಇವರೇ.

**ನಂತರ 'ಹೊಟ್ಟು' ವರ್ಗದವರಿಗೆ ಏನಾಯಿತು?**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**ಮತ್ತಾಯ 3:12**

**"..........ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು."**

**ಇದರ ಅರ್ಥವೇನು?**

ನಾವು ನೆನಪಿನಲ್ಲಿಡಬೇಕಾದದ್ದು ಏನೆಂದರೆ ಹೇಗೆ "ಗೋಧಿ" ಮತ್ತು "ಹೊಟ್ಟು" ಸಂಕೇತಗಳಾಗಿವೆಯೇ ಹಾಗೆಯೇ "ಆರದ ಬೆಂಕಿಯಲ್ಲಿ" ಇದು ಸಹ ಒಂದು ಸಂಕೇತವಾಗಿದೆ!!

**ಈ ಸಂಕೇತದ ಅರ್ಥವೇನು?**



"ಬೆಂಕಿ" ಎಂದರೆ ಸತ್ಯವೇದದಲ್ಲಿ, ದೇವರ ನ್ಯಾಯತೀರ್ಪಿಗೆ ಸಂಕೇತವಾಗಿದೆ.



ಹೌದು! ದೇವರ ನ್ಯಾಯತೀರ್ಪು ಎರಡು ಕಾರಣಗಳಿಗೆ ಇವೆ–

**ಪಾಪವನ್ನು ಅಳಿಸುವುದಕ್ಕೆ.**

**ಮನುಷ್ಯರ ಹೃದಯಗಳನ್ನು ಶುದ್ಧಿಮಾಡುವದಕ್ಕೆ.**

ಈ ಎರಡೂ ಗುಣಗಳನ್ನು "ಬೆಂಕಿಯಲ್ಲಿ" ಮಾತ್ರ ನೋಡಬಹುದು.

ಮತ್ತು ಇದು ಬೆಂಕಿಯನ್ನು ಸೂಚಿಸುತ್ತದೆ!!!

ಅದ್ದರಿಂದ ಬೆಂಕಿಯು ದೇವರ ನ್ಯಾಯತೀರ್ಪಿಗೆ ಸರಿಯಾದ ಸಂಕೇತವಾಗಿದೆ ಎಂದು **ದಾನಿಯೇಲನು 7:10 ಮತ್ತು ಯೆಶಾಯ 66:15,16** ಮತ್ತು ಸತ್ಯವೇದದ ಇನ್ನಿತರ ವಾಕ್ಯಗಳಲ್ಲಿ ಓದುತ್ತೇವೆ.

ಇಲ್ಲಿ ಈ "ಹೊಟ್ಟು" ಎಂದರೆ ಇಸ್ರಾಯೇಲ್ ದೇಶವನ್ನು ಸೂಚಿಸುತ್ತದೆ ಮತ್ತು ಬೆಂಕಿ ಎಂದರೆ ಇಸ್ರಾಯೇಲ್ ಮೇಲಿನ ನ್ಯಾಯ ತೀರ್ಪನ್ನು ಸೂಚಿಸುತ್ತದೆ. ಈ ಮಹಾಸಂಕಟದ ಕಾಲವು ಕ್ರಿ.ಶ **33** ರಿಂದ ಯೇಸು ಈ ಕೆಳಗಿನ ವಾಕ್ಯಗಳನ್ನು ಹೇಳಿದ ನಂತರ ಬಂದಿತೆಂದು ನೋಡುತ್ತೇವೆ –

**"ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ"**....... (ಮತ್ತಾಯ 23:38)



ಕ್ರಿ.ಶ 70 ಪೂರ್ಣವಾದ ಮೇಲೆ ಆ ದೇಶವೇ ಇಲ್ಲದೆ ಹೋಯಿತು ಆ ಜನರೆಲ್ಲರೂ ಲೋಕದ ಎಲ್ಲಾ ದೇಶಗಳಲ್ಲಿ ಚದರಿ ಹೋದರು ಮತ್ತು ಆ ಭೂಮಿ ಬರಿದಾಗಿ ಬಿಟ್ಟಿತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜೆಕರ್ಯ 7:14**

**"…..ಅವರು ನೋಡದ ಎಲ್ಲಾ ಜನಾಂಗಗಳ ಮಧ್ಯಕ್ಕೆ ಅವರನ್ನು ತೂರಿಬಿಡುವೆನು. ಯೆಹೋವನ ಈ ಮಾತಿನಂತೆ ಅವರು ಚದರಿದ ಮೇಲೆ ದೇಶವು ಹಾಳಾಯಿತು, ಅದರಲ್ಲಿ ಯಾರೂ ಹೋಗುತ್ತಿರಲಿಲ್ಲ, ಬರುತ್ತಿರಲಿಲ್ಲ; ಆ ರಮ್ಯದೇಶವನ್ನು ಹಾಳುಗತಿಗೆ ತಂದರಷ್ಟೆ."**

**"ಆರದ ಬೆಂಕಿ" ಎಂದರೆ ಏನು ಅರ್ಥ?**

ಆರದ ಬೆಂಕಿ ಎಂದರೆ ಇಸ್ರಾಯೇಲ್ ದೇಶದವರು ತಮಗೆ ಬರುವ ಸಂಕಟ ಮತ್ತು ನಿಲ್ಲಿಸಲಾಗದ ನ್ಯಾಯತೀರ್ಪನ್ನು, ಅವರು ನಿವಾರಿಸಲೂ ಆಗುವುದಿಲ್ಲ ಮತ್ತು ಅದರಿಂದ ತಪ್ಪಿಸಿಕೊಳ್ಳಲೂ ಆಗುವುದಿಲ್ಲ!

ಇದು ಅವರ ಮೇಲೆ ಬರಬೇಕೆಂದು ಮೊದಲೇ ಗೊತ್ತುಮಾಡಲಾಗಿದೆ ಏಕೆಂದರೆ ಅದನ್ನು ಅವರೇ ಕೇಳಿಕೊಂಡರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 27:25**


**"….ಜನರೆಲ್ಲಾ–ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ ಅಂದರು"**

ಹೌದು! ಈ "ಬೆಂಕಿ" ಎಂಬ ನ್ಯಾಯತೀರ್ಪು ಕ್ರಿ.ಶ 70 ರಲ್ಲಿ ನೆರವೇರಿತು.

ಈಗ ಸತ್ಯವೇದದಲ್ಲಿನ ಎರಡನೆಯ "ಸುಗ್ಗೀಕಾಲ"ವನ್ನು ಕುರಿತು ನೋಡೋಣ –

## ಸುವಾರ್ತಾ ಯುಗದ ಸುಗ್ಗೀಕಾಲ

ಇಲ್ಲಿ ನೆಲ ಯಾವುದೆಂದರೆ…… ಲೋಕದ ಎಲ್ಲಾ ಜನಾಂಗಗಳಲ್ಲಿ ಇರುವ ಕ್ರೈಸ್ತ ಭಾಗದವರು.



👉 ಬೇರ್ಪಡಿಸುವಂತಹ "ಸುಗ್ಗಿ"ಯಲ್ಲಿ ಇರುವ ಸಂಕೇತಗಳು ಯಾವುದೆಂದರೆ "ಗೋಧಿ" ಮತ್ತು "ಹಣಜಿ".

➡ **ಇದರ ಅರ್ಥವೇನು?**

ಈ "ಸುಗ್ಗೀಕಾಲದ" ವಿವರಣೆಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 13:30**

**"ಸುಗ್ಗೀಕಾಲದ ತನಕ ಎರಡೂ ಕೂಡ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನು ಕೊಯ್ಯುವವರಿಗೆ–ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು."**

ಹೌದು! ಇಲ್ಲಿ "ಗೋಧಿ" ಎಂದರೆ "ನಿಜವಾದ ಕ್ರೈಸ್ತರು", ಹೇಗೆ ಮೊದಲ ಸುಗ್ಗೀಕಾಲದಲ್ಲಿ ಗೋಧಿಯನ್ನು ಯೆಹೂದ್ಯರಿಗೆ ಸೂಚಿಸಲಾಗುತ್ತಿತ್ತೋ ಹಾಗೆಯೇ ಈ "ಗೋಧಿ"ಯು ಅನ್ಯಜನರು ನಿಜವಾದ ಕ್ರೈಸ್ತರಾಗುವವರನ್ನು ಸೂಚಿಸುತ್ತದೆ.

👉 **ಈಗ "ಹಣಜಿ" ಎಂದರೆ ಅರ್ಥವೇನು?**

ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಮತ್ತು ಇದಕ್ಕೆ ಉತ್ತರ ಪಡೆದುಕೊಳ್ಳಲು ನಾವು ಕೆಳಗಿನ ವಾಕ್ಯವನ್ನು ಪೂರ್ತಿಯಾಗಿ ಓದೋಣ –

## ಮತ್ತಾಯ 13:24;30

**"ಆತನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು; ಅದೇನಂದರೆ– ಪರಲೋಕರಾಜ್ಯವು ಒಳ್ಳೆಯ ಬೀಜವನ್ನು ತನ್ನ ಹೊಲದಲ್ಲಿ ಬಿತ್ತಿದ್ದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ. ಆದರೆ ಜನರು ನಿದ್ರೆಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋದಿಯ ನಡುವೆ ಹಣಜಿ ಬಿತ್ತಿ ಹೋದನು. ಗೋದಿಯು ಬೆಳೆದು ಫಲಕ್ಕೆ ಬಂದಾಗ ಹಣಜಿ ಸಹ ಕಾಣಬಂತು. ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು– ಅಯ್ಯಾ, ನೀನು ನಿನ್ನ ಹೊಲದಲ್ಲಿ ಒಳ್ಳೆಯ ಬೀಜ ಬಿತ್ತಿದಿಯಲ್ಲಾ; ಹಣಜಿ ಎಲ್ಲಿಂದ ಬಂತು ಎಂದು ಕೇಳಲು ಅವನು– ಇದು ಒಬ್ಬ ವೈರಿ ಮಾಡಿದ ಕೆಲಸ ಅನ್ನಲಾಗಿ ಆಳುಗಳು ಅವನನ್ನು– ಹಾಗಾದರೆ ನಾವು ಅದನ್ನು ಆರಿಸಿ ತೆಗೆಯೋಣವೇ ಎಂದು ಕೇಳಲು ಅವನು– ಬೇಡ; ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋದಿಯನ್ನೆಲ್ಲಾದರೂ ಕಿತ್ತೀರಿ. ಸುಗ್ಗೀಕಾಲದ ತನಕ ಎರಡೂ ಕೂಡ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನುಕೊಯ್ಯುವವರಿಗೆ– ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು."**

ಈ ಸಾಮ್ಯರೂಪ ಭಾಷೆಯಲ್ಲಿ ಈ ಸುವಾರ್ತಾಯುಗ ಕಾಲದ ಕ್ರಿಸ್ತನ ಸಭೆಯ ಹುಟ್ಟು ಮತ್ತು ಬೆಳವಣಿಗೆಯ ಇತಿಹಾಸವನ್ನು ಕುರಿತು ತೋರಿಸಲಾಗಿದೆ.

**ಆದರೆ ಮುಖ್ಯವಾದ ಸಂಗತಿ ಏನೆಂದರೆ ಈ ಒಂದೇ "ಹೊಲದಲ್ಲಿ" ಎರಡು ವಿಧವಾದ ಬೀಜಗಳನ್ನು ಬಿತ್ತಲ್ಪಟ್ಟಿದೆ!**

- ವಾಕ್ಯ 24 ರಲ್ಲಿ "ಒಳ್ಳೆಯ ಬೀಜವು" "ಗೋಧಿಯನ್ನು" ಮಾಡುತ್ತದೆ.
- ವಾಕ್ಯ – 25 ರಲ್ಲಿ "ಸೈತಾನನು" (ವೈರಿಯು) ಬಿತ್ತಿದ ಬೀಜವು "ಹಣಜಿಯನ್ನು" ಉತ್ಪತ್ತಿ ಮಾಡುತ್ತದೆ.

## "ಒಳ್ಳೆಯ ಬೀಜ" ಎಂದರೆ ಅರ್ಥವೇನು?


ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಲೂಕ 8:11

**"ಆ ಬೀಜವೆಂದರೆ ದೇವರ ವಾಕ್ಯ"**

ಹೌದು! ಇದು "ಪರಲೋಕ ರಾಜ್ಯದ ಸುವಾರ್ತೆಯಾಗಿದೆ"

**(ಮತ್ತಾಯ 9:35)**



ಒಬ್ಬ "ಮನುಷ್ಯನು" ಒಳ್ಳೆಯ ಬೀಜವನ್ನು ಬಿತ್ತಿದನು – ಈ ವಿಷಯದಲ್ಲಿ ಸುವಾರ್ತೆಯನ್ನು ಸಾರುವ ಕೆಲಸವನ್ನು ಕ್ರೈಸ್ತ ಸಭೆಯ ಸಂಸ್ಥಾಪಕ – ನಮ್ಮ ಕರ್ತನಾದ ಯೇಸು ಮಾಡಿರುವನು.

ಆತನು ಈ ಸುವಾರ್ತೆಯನ್ನು **"ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರಿಗೆ"** (ಮತ್ತಾಯ 15:24) ಮಾತ್ರ ಸಾರುವುದಕ್ಕೆ ನಿರ್ಬಂಧ ಪಡಿಸಿಕೊಂಡಿದ್ದನು ಮತ್ತು ಈ ಸುವಾರ್ತೆಯನ್ನು ಇಸ್ರಾಯೇಲಿನ ಹೊರಗೆ ಸಾರುವುದಕ್ಕೆ ತನ್ನ ಅಪೋಸ್ತಲರು ಮತ್ತು ಶಿಷ್ಯರಿಗೆ ಜವಾಬ್ದಾರಿಯನ್ನು ವಹಿಸಿದ್ದನು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 1:8**

**"ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು."**

**ಹೌದು! ಈ "ಮನುಷ್ಯ"ರುಗಳೇ ಆ ಒಬ್ಬ "ಮನುಷ್ಯನು" ಎಂಬುದನ್ನು ಸೂಚಿಸುತ್ತದೆ!**



ಅವರು ಸತ್ಯವೇದದಿಂದ ಸುವಾರ್ತೆಯನ್ನು ಮತ್ತು ಸತ್ಯದ ಬೋಧನೆಯನ್ನು ಸಾರಿದರು.

**ಅದನ್ನು "ಅತಿ ಪರಿಶುದ್ಧವಾದ ಕ್ರಿಸ್ತ ನಂಬಿಕೆ' ಎಂದು ಕರೆಯಲಾಗುತ್ತದೆ (ಯೂದನು :20)**

ಆದರೆ ಕೆಲಕಾಲಗಳ ನಂತರ ಆ "ಮನುಷ್ಯರು ನಿದ್ರೆ ಹೋದರು"ಅಥವಾ ಬೇರೆ ರೀತಿ ಹೇಳುವುದಾದರೆ ಈ ಅಪೋಸ್ತಲರು ಸತ್ತರು!

**ಈಗ ಈ 'ಮನುಷ್ಯರು ನಿದ್ರೆ' ಹೋದಾಗ ಬಂದಂತಹ ವಿರೋಧಿ ಯಾರು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 13:39**

**".......ಅದನ್ನು ಬಿತ್ತುವ ವೈರಿ ಅಂದರೆ ಸೈತಾನನು."**

ಇದು "ಮನುಷ್ಯರು ನಿದ್ರೆ' ಹೋದ ಮೇಲೆ ಅಂದರೆ ಸಭೆಯ ಇತಿಹಾಸದ ಮೊದಲ ಶತಮಾನದಲ್ಲಿ ಅಪೋಸ್ತಲರು ಸತ್ತ ನಂತರದ ಚಿತ್ರಣವಾಗಿದೆ.

ಈಗ ಸಭೆಯ ಒಳಗೇ ಅಥವಾ "ಗೋಧಿಯ" ಮಧ್ಯದಲ್ಲಿ ವೈರಿಯು ಯಾವ ಬೀಜವನ್ನು, ಅದೇ ಹೊಲದಲ್ಲಿ ಬಿತ್ತಿದನು?

ವೈರಿಯು ಬಿತ್ತಿದ "ಬೀಜ" ಯಾವುದೆಂದರೆ..... ತಪ್ಪು ಅಭಿಪ್ರಾಯಗಳು ಮತ್ತು ಸುಳ್ಳು ಬೋಧನೆಗಳು.

**ಪ್ರತಿಯೊಂದು ಸತ್ಯವನ್ನು ವ್ಯವಸ್ಥಿತವಾಗಿ ತಪ್ಪು ಅಭಿಪ್ರಾಯಗಳಿಂದ ನಕಲು ಮಾಡಲಾಯಿತು!**

ಇದನ್ನು ಕುರಿತು ಅಪೋಸ್ತಲನದ ಪೌಲನು 1 ತಿಮೊಥೆಯ 4:1 ರಲ್ಲಿ ಪ್ರವಾದಿಸಿದನು.

**"ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ."**

ಹೌದು! ಇಂತಹ ಸುಳ್ಳು ಬೋಧನೆಗಳನ್ನು ಕುರಿತು ನಮಗೆ ಮೊದಲೇ ಗೊತ್ತಿದೆ ಮತ್ತು ಇವುಗಳನ್ನು ಕುರಿತು ಹಿಂದಿನ ಪಾಠಗಳಲ್ಲಿ ಅಭ್ಯಾಸ ಮಾಡಿದ್ದೇವೆ ಅವು ಯಾವುದೆಂದರೆ......

**ಮನುಷ್ಯನ ಆತ್ಮವು ಸಾವಿಲ್ಲದೆ ಇರುವದು.**

**ನರಕವೆಂಬದು ಒಂದು ಚಿತ್ರಹಿಂಸೆ ಕೊಡುವ ಸ್ಥಳ ಎಂಬ ಬೋಧನೆಗಳು**

**ದೇವರು ಎಂದರೆ ತ್ರೈಯೇಕತ್ವವು ಮತ್ತು........ ಸತ್ಯವೇದದಲ್ಲಿ ಇಲ್ಲದೇ ಇರುವ ಅನೇಕ ಸುಳ್ಳು ಬೋಧನೆಗಳು!**

ಹೌದು! ಆದ್ದರಿಂದ, ಯೇಸುವಿನ ಸತ್ಯ ಉಪದೇಶಗಳು, ದೇವರ ಪವಿತ್ರಾತ್ಮ ಮತ್ತು ಸುವಾರ್ತೆಗಳು ಬದಲಾದವು!!

ಇದನ್ನು ಕುರಿತು ಅಪೋಸ್ತಲನಾದ ಪೌಲನು ನಮಗೆ ಸ್ಪಷ್ಟವಾಗಿ ಬೋಧಿಸುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 11:4**

**“ಯಾಕಂದರೆ ನಾವು ಪ್ರಸಿದ್ಧಿಪಡಿಸದಿದ್ದ ಮತ್ತೊಬ್ಬ ಯೇಸುವನ್ನು ನಿಮ್ಮ ಬಳಗೆ ಬರುವವರು ಪ್ರಕಟಿಸುವಾಗಲೂ ನೀವು ಹೊಂದದೆ ಇದ್ದ ಬೇರೆ ವಿಧವಾದ ಆತ್ಮಪ್ರೇರಣೆಯನ್ನು ಹೊಂದುವಾಗಲೂ ಅವಲಂಬಿಸದೆಯಿದ್ದ ಬೇರೊಂದು ಸುವಾರ್ತೆಯನ್ನು ಕೇಳುವಾಗಲೂ ನೀವು ಸಹಿಸಿಕೊಳ್ಳುತ್ತಿರುವದು ಬಹು ಆಶ್ಚರ್ಯ.”**

ಹೌದು! "ನಿಜವಾದ" ಯೇಸುವಿನ ದೃಷ್ಟಿಯನ್ನು ಕಳೆದುಕೊಂಡರು ಮತ್ತು "ಮತ್ತೊಬ್ಬ ಯೇಸು"ವಿನ ಬಗ್ಗೆ ಬೋಧಿಸಲಾರಂಭಿಸಿದರು.



"ಮರಿಯಳ ಮಗ"ನು, ಆಕೆಯು ಏನು ಕೇಳಿಕೊಂಡರು ಆತನು ಮಾಡುವನು.

**ಆತನೇ ತಂದೆಯ ಬಳಿ ಹೋಗುವುದಕ್ಕೆ "ಮಾರ್ಗ"ವೆಂದು** ಸತ್ಯವೇದವು ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ. **ಯೋಹಾನ 14:6**
ಆದರೆ, ಆತನನ್ನೇ (ಯೇಸು) ಸರ್ವಶಕ್ತನಾದ ದೇವರನ್ನಾಗಿ ಮಾಡಲಾಯಿತು.

ಆದ್ದರಿಂದ ತಮಿಳಿನಲ್ಲಿ ಯೇಸುವನ್ನು ಹೀಗೆ ಸೂಚಿಸಲಾಗಿದೆ –

“ಯೇಸಪ್ಪಾ” ಅಂದರೆ ತಂದೆಯಾದ ಯೇಸು!!

ಆತನು “ಒಬ್ಬನೇ ಮಗನು” ಮತ್ತು “ಎಲ್ಲಾ ಸೃಷ್ಟಿಗಳಲ್ಲಿ ಪ್ರಥಮ ಫಲನು” – ಪರಲೋಕ ತಂದೆಯ ಮೊದಲ ನೇರವಾದ ಸೃಷ್ಟಿಯಾಗಿರುವ ಯೇಸುವನ್ನು ತ್ರೈಯೇಕತ್ವ “ದೇವರುಗಳಲ್ಲಿ” ಎರಡನೆಯ ವ್ಯಕ್ತಿಯಾಗಿ ಮಾಡಿಬಿಟ್ಟರು.

**“ಎಲ್ಲಾ ವಿಧವಾದ ಸತ್ಯದಲ್ಲಿ”** ನಡೆಸುವಂತಹ "ನಿಜವಾದ’ ಪವಿತ್ರಾತ್ಮದ ದೃಷ್ಟಿಯನ್ನು ಕಳೆದುಕೊಂಡು ಅತಿಯಾಗಿ **ಉದ್ರೇಕಗೊಳ್ಳುವುದು, ನಗುವುದು, ಕುಣಿಯುವದು ಮತ್ತು ವಾಂತಿಯನ್ನು ಮಾಡುವದು ಸಹ ಒಪ್ಪಿಕೊಳ್ಳಲಾಯಿತು!**



**“ನಿಜವಾದ” ರಾಜ್ಯದ ಸುವಾರ್ತೆಯ** ದೃಷ್ಟಿಯನ್ನು ಕಳೆದುಕೊಂಡು "ಬೇರೊಂದು ಸುವಾರ್ತೆ’ಯನ್ನು ಸಾರಲಾಯಿತು –

ಹೌದು! ನಿತ್ಯವಾಗಿ ಚಿತ್ರಹಿಂಸೆ ಕೊಡುವಂತಹ "ನರಕ’ದಿಂದ ಆತ್ಮಗಳನ್ನು ರಕ್ಷಿಸುವ ಸುವಾರ್ತೆಯನ್ನು ಸಾರಲಾಯಿತು.

ಆದರೆ ನಿಜವಾಗಿ ವಾಕ್ಯವು ನಮಗೆ ಬೋಧಿಸುವುದೇನೆಂದರೆ ಕಲ್ವಾರಿಯಲ್ಲಿ ಯೇಸುವಿನ ಮರಣದ ಮೂಲಕ ಎಲ್ಲಾ ಆತ್ಮಗಳು ಮೊದಲೇ ರಕ್ಷಿಸಲಾಗಿದೆ ಮತ್ತು ಎಲ್ಲರೂ ನಿಶ್ಚಯವಾಗಿ ಜೀವಕ್ಕೆ ಎಚ್ಚೆತ್ತು ಕೊಳ್ಳುವರು. **(1 ಕೊರಿಂಥ 15:22)**

ಈ ದಿನಗಳಲ್ಲಿ ಬಹಳ ಹೆಸರಾಂತವಾಗಿರುವುದು ಯಾವುದೆಂದರೆ “ಹಣದಲ್ಲಿ

ಅಭಿವೃಧಿ ಹೊಂದುವ ಸುವಾರ್ತೆ." ಮತ್ತು ಅವರು ಹಕ್ಕು ಸಾಧಿಸುವುದೇನೆಂದರೆ ದೇವರು ತಮ್ಮ ಮಕ್ಕಳು ಐಶ್ವರ್ಯ ಮತ್ತು ಅಭಿವೃಧಿ ಹೊಂದುವುದರಲ್ಲಿ ಇಷ್ಟಪಡುತ್ತಾನೆ.ಇದಕ್ಕೆ ಕಾರಣ ವೇದವಾಕ್ಯಗಳನ್ನು ತಪ್ಪಾಗಿ ಉಪಯೋಗಿಸುತ್ತಾರೆ.


ಅವು ಯಾವುದೆಂದರೆ **ಪಿಲಿಪ್ಪಿಯವರಿಗೆ 4:19** – **"ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು."**

ಮತ್ತೆ .......ಇನ್ನೊಂದು ವಾಕ್ಯ – **ಎಫೆಸದವರಿಗೆ 3:20** – **" ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾವಾದದನ್ನು ಮಾಡಲು ಶಕ್ತನಾದ ದೇವರಿಗೆ ..."**

ಹೌದು! ಅವರು ಇದನ್ನು ಅಜ್ಞಾನದಿಂದ ಮಾಡಿದ್ದಾರೆ. ಏಕೆಂದರೆ ಬೇರೆ ವಾಕ್ಯಗಳಾದ **ಅಪೋಸ್ತಲರ ಕೃತ್ಯಗಳು 14:22** ಮತ್ತು **2 ತಿಮೊಥೆಯನಿಗೆ 2:11, 12**ರಲ್ಲಿ, ಸುವಾರ್ತೆಯಲ್ಲಿ ನಂಬಿಕೆಯಿಡುವದರಿಂದ ಸಂಕಟ, ಕಷ್ಟಾನುಭವ ಮತ್ತು ಮರಣ ಉಂಟಾಗುತ್ತದೆ.

ನಂತರ "ಯೇಸು ಕ್ರಿಸ್ತನ ಸುವಾರ್ತೆ"ಯನ್ನು ಕುರಿತು ನೋಡುತ್ತೇವೆ, ಇಲ್ಲಿ ಕರ್ತನಾದ ಯೇಸುವನ್ನು ಕುರಿತು ಬೋಧಿಸುವುದೇನೆಂದರೆ – ಒಬ್ಬನೇ ನಿಜವಾದ ದೇವರು. ಆದರೆ ನಮ್ಮ ಕರ್ತನ ವಾಕ್ಯವಾದ ಯೋಹಾನ 17:3 ರಲ್ಲಿ ಸ್ಪಷ್ಟವಾಗಿ ಓದುತ್ತೇವೆ.

........ಮತ್ತು ಇನ್ನೂ ಅನೇಕ ಇಂತಹ "ಸುವಾರ್ತೆ"ಗಳನ್ನು ಅನೇಕ ವರ್ಷಗಳಿಂದ ಈ ರೀತಿಯಾಗಿ ಸಾರಲಾಗುತ್ತಲಿದೆ!



ಇವೆಲ್ಲವು ತಪ್ಪು ಉಪದೇಶಗಳಾಗಿದ್ದು ಸೈತಾನನು ಕ್ರೈಸ್ತರ "ಹೊಲ"ದಲ್ಲಿ ಅಥವಾ ಸಭೆಯಲಿ ಇಂತಹ "ಬೀಜ"ವನ್ನು ಬಿತ್ತಿ "ಹಣಜಿ" ಉಂಟಾಗುವಂತೆ ಮಾಡಿದ್ದಾನೆ.

**ಸಂಕೇತವಾಗಿರುವ ಈ 'ಹಣಜಿ' ಎಂದರೇನು ?**

ಈ "ಹಣಜಿ'ಗಳು ಹೊರ ನೋಟಕ್ಕೆ ಗೋಧಿ ಗಿಡದಂತೆ ಕಾಣುತ್ತದೆ.
ಸಾಮಾನ್ಯವಾಗಿ ನೋಡುವವರಿಗೆ ಹೊಲದಲ್ಲಿರುವ
ಈ "ಹಣಜಿ'ಗಳು, ಇದು ಗೋಧಿ ಅಂದು ಕೊಳ್ಳುತ್ತಾರೆ!!
ಆದರೆ ನಿಜವಾಗಿಯೂ ಇದು ಗೋಧಿ ಅಲ್ಲ!

**ಸಸ್ಯಶಾಸ್ತ್ರದಲ್ಲಿ ಇದರ ಹೆಸರು "ಬರ್ಡಡ್ ಡಾರ್ನೆಲ್"**

**ಬಹಳ ಹತ್ತಿರದಿಂದ ಗಮನಿಸುವಾಗ ಅದರ ವ್ಯತ್ಯಾಸ ಗೊತ್ತಾಗುತ್ತದೆ.....**



- ಅದರ ಧಾನ್ಯವು.... ಕಪ್ಪಾಗಿರುತ್ತದೆ ಆದರೆ ಗೋಧಿಯ ಬಣ್ಣವು ಬಂಗಾರದಂತಿರುತ್ತದೆ.
- ಅದರ ಧಾನ್ಯವು.... ಬಹಳ ಲಘುವಾಗಿರುತ್ತದೆ ಆದರೆ ಗೋಧಿಯ ಭಾರವು ಹೆಚ್ಚಾಗಿರುತ್ತದೆ.
- ಹಣಜಿ ಗಿಡಗಳ ಧಾನ್ಯವು ಬಹಳ ಲಘುವಾಗಿರುವುದರಿಂದ.... ಆದರೆ ಗೋಧಿಯ ಗಿಡವು ಗಾಳಿಗೆ ಬಗ್ಗುತ್ತದೆ ಮತ್ತು ವಾಲುತ್ತದೆ.
- ಈ ಹಣಜಿ ಗಿಡಗಳ ಧಾನ್ಯವನ್ನು ತಿಂದರೆ ಅದು ಬಹಳ ವಿಷಕಾರಿಯಾಗಿರುತ್ತದೆ, ಮತ್ತು ಅಧಿಕ ವಾಂತಿಯುಂಟಾಗುತ್ತದೆ.

**ಆದರೆ ಗೋಧಿ ಧಾನ್ಯವು ಜೀವದ ಆಹಾರವಾಗಿದೆ!**

**ಇವೆಲ್ಲದರ ಅರ್ಥಗಳೇನು?**

ಇದೊಂದು "ಹೊಲ" – ಸಭೆಯನ್ನು ಸೂಚಿಸುತ್ತದೆ ಸಭೆಯಲ್ಲಿ ಎರಡು ವಿಧವಾದ ಕ್ರೈಸ್ತರಿದ್ದಾರೆ –

**“ಗೋಧಿ”** ಮತ್ತು **“ಹಣಜಿ”**

**“ಗೋಧಿ”**



ನಿಜವಾದ ಕ್ರೈಸ್ತರನ್ನು ಸೂಚಿಸುತ್ತದೆ ಅವರ ನಂಬಿಕೆ, ನಂಬಿಕೆಗೆ ಆಧಾರವು ಸತ್ಯವಾಗಿರುತ್ತದೆ ಮತ್ತು ಅವರು "ಕ್ರಿಸ್ತ"ನನ್ನು ಹೊಂದಿದ್ದು ದೇವರ ವಾಕ್ಯವಾಗಿರುವ ಸತ್ಯವೇದಕ್ಕೆ ವಿಧೇಯರಾಗಿರುತ್ತಾರೆ

**“ಹಣಜಿ”**



ಇವರು "ಹೊರನೋಟಕ್ಕೆ" ಮತ್ತು ಹೆಸರಿಗೆ ಮಾತ್ರ ಕ್ರೈಸ್ತರಾಗಿರುತ್ತಾರೆ. ಆದರೆ ಬಹಳ ಹತ್ತಿರದಿಂದಿದ್ದು ಪರೀಕ್ಷಿಸುವಾಗ ಹಣಜಿ ಗಿಡದಲ್ಲಿ ಕಂಡಂತೆ ವ್ಯತ್ಯಾಸವು ಪ್ರಕಟವಾಗುತ್ತದೆ.

## "ಧಾನ್ಯವು ಕಪ್ಪು ಬಣ್ಣವಾಗಿರುತ್ತದೆ"



ಈ "ಬೀಜವು" ಅಥವಾ ಬೋಧನೆಗಳು ಮತ್ತು ನಂಬಿಕೆಗಳು ತಪ್ಪಾದ ಸೈತಾನನ ಬೋಧನೆಗಳಾಗಿರುತ್ತದೆ ("ಕಪ್ಪು") ಮತ್ತು ದೇವರ ಬೋಧನೆಗಳಲ್ಲ ("ಬಂಗಾರ")

**(ಅಭ್ಯಾಸ–31, ದೇವ ದರ್ಶನ ಗುಡಾರದ**
**ಅಧ್ಯಯನದಲ್ಲಿ ಬರುವ "ಪರಿಶುದ್ಧ' ಮತ್ತು "ಮಹಾ ಪರಿಶುದ್ಧ' ಸ್ಥಳಗಳಲ್ಲಿರುವ ವಸ್ತುಗಳು ಬಂಗಾರದಾಗಿದ್ದು ಅದು**
**ದೇವರ ದಿವ್ಯ ಸ್ವಭಾವವನ್ನು ಸೂಚಿಸುತ್ತದೆ ಎಂದು ಅಭ್ಯಾಸ ಮಾಡುತ್ತೇವೆ)**

## "ಧಾನ್ಯವು ಬಹಳ ಹಗುರವಾಗಿರುತ್ತದೆ"

ಈ "ಬೀಜವ" ಅಥವಾ ಬೋಧನೆಗಳು ಬಲವಿಲ್ಲದ ಮತ್ತು ಸತ್ಯವೇದದ ಮತ್ತು ಸತ್ಯದ ಮೂಲಾಧಾರ ಇದರಲ್ಲಿರುವುದಿಲ್ಲ.ಅವುಗಳು ಸತ್ಯವೇದದಲ್ಲಿ ಕಾಣುವುದೇ ಇಲ್ಲ!

ಆದ್ದರಿಂದ ಇಂತಹ ಕ್ರೈಸ್ತರೊಂದಿಗೆ ಸತ್ಯವೇದದ ಕುರಿತು ವಿಚಾರಣೆ ಅಥವಾ ಸತ್ಯವೇದದಲ್ಲಿ ಕಂಡು
ಬರುವ ನಂಬಿಕೆಗಳ ಬಗ್ಗೆ ಅಧ್ಯಯನ ಮಾಡಿದರೆ ಕೇವಲ ನಿರಾಕರಣೆ ಮತ್ತು ವಾಗ್ವಾದಗಳು ಉಂಟಾಗುತ್ತದೆ.

ಉದಾ: ತ್ರೈಯೇಕತ್ವವನ್ನು ಕುರಿತು ಬೋಧನೆ.



### "ಗಾಳಿಯನ್ನು ಎದುರಿಸಿ ನಿಲ್ಲುವುದು"

ಇದರ ಅರ್ಥವೇನೆಂದರೆ ಒಬ್ಬ ವ್ಯಕ್ತಿಗೆ ಈ ದುಷ್ಟ ಲೋಕದಲ್ಲಿರುವ "ಗಾಳಿ" ಎಂಬ ತೊಂದರೆಗಳನ್ನು ತಾಳ್ಮೆಯಿಂದ "ಭಾಗಿ" ಸಹಿಸುವ "ಕ್ರಿಸ್ತನ ಆತ್ಮ" ಇರುವುದಿಲ್ಲ. ಆದರೆ "ಯಾರಿಗೂ ಅಪರಾದಕ್ಕೆ ಅಪರಾಧವನ್ನು ಮಾಡಬೇಡಿರಿ.
**(ರೋಮಾಪುರದವರಿಗೆ 12:17)**

### "ಧಾನ್ಯವು ವಿಷಕಾರಿಯಾಗಿದ್ದು ಅಧಿಕ ವಾಂತಿಯನ್ನುಂಟು ಮಾಡುತ್ತದೆ"

ಈ "ದೆವ್ವಗಳ ಬೋಧನೆಗಳನ್ನು ತಿಂದರೆ ಅಥವಾ ಸ್ವೀಕರಿಸಿದರೆ ಅದರಿಂದ ಜೀವ ಉಂಟಾಗುವುದಿಲ್ಲ, ಅದರಿಂದ ಒಬ್ಬ ವ್ಯಕ್ತಿ ತ್ರೈಯೇಕತ್ವ, ನರಕವೆಂದರೆ ನಿತ್ಯ ಯಾತನೆಯ ಸ್ಥಳ, ಸಾವಿಲ್ಲದ ಆತ್ಮ ಇತರೆ, ವಿಷಕಾರಿಯಾದ ಸುಳ್ಳು ಬೋಧನೆಗಳನ್ನು ಪಡೆದುಕೊಳ್ಳುವನು.

ಈ ರೀತಿಯಾದ ಬೋಧನೆಗಳನ್ನು "ಸ್ವೀಕರಿಸುವಾಗ" "ಅಧಿಕವಾದ ವಾಂತಿ"ಯುಂಟಾಗುತ್ತದೆ ಹಾಗು ಅವರು ಆಡುವ ಅನೇಕ ಮಾತುಗಳು ಹಾಗು ಬೋಧನೆಗಳು ಕೊಳೆತು ಹೋದಂತಿರುವದನ್ನು ನ್ಯಾಯಪಡಿಸುತ್ತಾರೆ ಮತ್ತು ಇವೆಲ್ಲವೂ ಸತ್ಯವೇದಕನುಸಾರವಾದ ಸತ್ಯಗಳೇ ಅಲ್ಲ.

ಆದ್ದರಿಂದ ಈ ಪ್ರಸ್ತುತ ದಿನಗಳಿನ ಸಭೆಯ ಸ್ಥಿತಿಯ ಕುರಿತು ಇರುವ ಪ್ರವಾದನೆಯನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 28:8

**"ಅವರ ಮೇಜುಗಳ ಮೇಲೆಲ್ಲಾ ವಾಂತಿಯೂ ಎಂಜಲೂ ತುಂಬಿವೆ, ಶುದ್ಧಸ್ಥಳವೇ ಇಲ್ಲ."**

### ಈ ವಾಕ್ಯದ ಅರ್ಥವೇನು?

ನಿಶ್ಚಯವಾಗಿಯೂ ಈ "ಮೇಜುಗಳು" ನಿಜವಾದ ಆಹಾರಗಳನ್ನು ಸೇವಿಸುವದಕ್ಕೆ ಇರುವ ನಿಜವಾದ ಮೇಜುಗಳಲ್ಲ!!

ಇದು ಆತ್ಮೀಕ ಆಹಾರವನ್ನು ಸೇವಿಸುವದಕ್ಕೆ ಇರುವ ಮೇಜುಗಳನ್ನು ಸೂಚಿಸುತ್ತದೆ!

ಹೌದು! ಇದು ಅನೇಕ ಸಭೆಗಳಲ್ಲಿ ಆತ್ಮೀಕ ಆಹಾರವನ್ನು ಬಡಿಸುವದನ್ನು ಮತ್ತು ಸೇವಿಸುವದನ್ನು ಸೂಚಿಸುತ್ತದೆ.

## ಈ ದಿನಗಳಲ್ಲಿ ಸಭೆಗಳು ಈ ವಿಧವಾದ ಉಪದೇಶ ಮತ್ತು ಬೋಧನೆಗಳು ಮಾಡುವದನ್ನು ಕುರಿತ ಪ್ರವಾದನೆಯಾಗಿದೆ!



ಹೌದು! ಈ "ವಾಂತಿ"ಯು "ಜೀರ್ಣವಾಗದ ಆಹಾರ".

"ಅರ್ಥವಾಗದ ಅಥವಾ ಅರ್ಥವಾಗದ ಹಾಗೆ ಮಾಡುವ ಉಪದೇಶಗಳನ್ನು" ಸೂಚಿಸುತ್ತದೆ ಉದಾ: ತ್ರೈಯೇಕತ್ವ.

ಮತ್ತು ಎಂಜಲು ಎಂದರೆ ಪ್ರವಚನ ಪೀಠದಲ್ಲಿ ಮನುಷ್ಯರ ತತ್ವಶಾಸ್ತ್ರಗಳು ಹಾಗು ತರ್ಕ ಮಾತುಗಳನ್ನು ಸೂಚಿಸುತ್ತದೆ ಉದಾ:..... **ಸತ್ಯವೇದದಲ್ಲಿ ಆಧಾರವೇ ಇಲ್ಲದಂತಹ ಡಾರ್ವಿನ್ಸ್ ತಿಯರಿ ಆಫ್ ಎವಲ್ಯೂಷನ್** (Darwin's theory of evolution) ಬೋಧನೆಗಳು.

ಹೌದು! ಈ ದಿನಗಳಲ್ಲಿ ಸಭೆಗಳ ಬೋಧನೆಗಳು ಸತ್ಯವಾಕ್ಯವನ್ನೇ ಕಳೆದುಕೊಂಡಿವೆ ಮತ್ತು ಅವರ ಉದ್ದೇಶಗಳೆಲ್ಲಾ **ದೇವರನ್ನು ಮೆಚ್ಚಿಸುವದಕ್ಕಾಗಿ ಅಲ್ಲ...... ಆದರೆ.... ಮನುಷ್ಯರನ್ನು ಮೆಚ್ಚಿಸುವದಕ್ಕಾಗಿ ಇವೆ!!**

ಹೌದು! ಈ "ವಾಂತಿ" ಎಂದರೆ "ಜೀರ್ಣವಾಗದೆಯಿರುವ" ಆಹಾರವನ್ನು ಸೂಚಿಸುತ್ತದೆ.

ಈಗ ಈ ಎರಡು ರೀತಿಯಾದ ಕ್ರೈಸ್ತರನ್ನು ಸುಗ್ಗೀಕಾಲದಲ್ಲಿ ಬೇರ್ಪಡಿಸಲಾಗುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಮತ್ತಾಯ 13:30

**"ಸುಗ್ಗೀಕಾಲದ ತನಕ ಎರಡೂ ಕೂಡ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನು ಕೊಯ್ಯುವವರಿಗೆ– ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು."**

ಹೌದು! ಇದೇ ನಿಜವಾದ ಕ್ರೈಸ್ತರನ್ನು ಹೆಸರಿಗೆ ಮಾತ್ರ ಇರುವ ಕ್ರೈಸ್ತರಿಂದ ಬೇರ್ಪಡಿಸುವಂಥದಾಗಿದೆ –

**"ಗೋಧಿ"**ಯನ್ನು **"ಹಣಜಿ"**ಯಿಂದ ಬೇರ್ಪಡಿಸುವಂಥದಾಗಿದೆ.

**ಇದನ್ನು ಹೇಗೆ ಮಾಡಲಾಗುತ್ತದೆ?**

ಇದನ್ನು "ಕೊಯ್ಯುವವರ" ಮೂಲಕ ಮಾಡಲಾಗುತ್ತದೆಂದು ಓದುತ್ತೇವೆ!

ಈ "ಕೊಯ್ಯುವವರು" ಯಾರು? ಬನ್ನಿ ಕೆಳಗಿನ ವಾಕ್ಯದಲ್ಲಿ ಓದೋಣ –

## ಮತ್ತಾಯ 13:39

**".....ಕೊಯ್ಯುವವರು ಅಂದರೆ ದೇವದೂತರು."**


ಇಲ್ಲಿ ದೇವದೂತರೆಂದರೆ ಗ್ರೀಕ್ ಭಾಷೆಯ "ಏಗ್ಗೆಲೋಸ್" ಎಂಬ ಪದದಿಂದ ಬಂದಿದೆ (ಸ್ಟ್ರಾಂಗ್ಸ್ ಗ್ರೀಕ್ ಸಂಖ್ಯೆ **32**) ಅಂದರೆ ಸುದ್ದಿ ಒಯ್ಯುವವ ಮನುಷ್ಯ ಜೀವಿ ಅಥವಾ ಆತ್ಮೀಕ ಜೀವಿಯಾಗಿರಬಹುದು.

**ಈಗ ಸುಗ್ಗೀಕಾಲದಲ್ಲಿ "ಗೋಧಿ"ಯನ್ನು ಬೇರ್ಪಡಿಸಲು ಉಪಯೋಗಿಸುವ ಸಾಧನ ಯಾವುದು?**

ಯೇಸು ಕ್ರಿಸ್ತನು ತನ್ನ ಮೊದಲನೆಯ ಬರುವಿಕೆಯಲ್ಲಿ ಸುಗ್ಗೀಕಾಲಕ್ಕೆ ಉಪಯೋಗಿಸಿದ ಸಾಧನಕ್ಕೆಹೋಲಿಕೆಯಾಗಿದೆ ಅದೇ – "ಕೈ ಬೀಸಣಿಕೆ" ಇದು ಆತನ ವಾಕ್ಯಗಳು ಅಥವಾ ದೇವರ ಸತ್ಯವಾಕ್ಯಗಳನ್ನು ಸೂಚಿಸುತ್ತದೆ!!

ಇಲ್ಲಿ ಮಾತ್ರವೇ, ಈ ಸುವಾರ್ತಾ ಯುಗದ ಕೊನೆಯಲ್ಲಿ, ಈ ಸತ್ಯವೇದದ ಸತ್ಯಗಳು "ಹೊಸ" ಸತ್ಯಗಳಾಗಿ ಕಾಣುತ್ತದೆ,

ಅದು ನಿಜಾಂಶವೂ ಆಗಿದೆ



**ಸತ್ಯವೇದದ ಬಹಳ ಹಳೆಯ ಸತ್ಯಗಳು.**

ಹೌದು! ಈ ಸತ್ಯಗಳು ಮಚ್ಚುಗತ್ತಿ (ಕುಡುಗೋಲು)ಯಂತೆ ಚೂಪಾಗಿದೆ!

ಆದ್ದರಿಂದ, ಈ ಎರಡನೆಯ ಸುಗ್ಗೀಕಾಲದ ಬೇರ್ಪಡುವಿಕೆಗಾಗಿ "ದೇವದೂತರು" ಅಥವಾ "ಸುದ್ದಿ ಒಯ್ಯುವವರು" ಇದೇ ಸತ್ಯಗಳನ್ನು ತೆಗೆದುಕೊಂಡಿದ್ದಾರೆ – ಅದೇನೆಂದರೆ

➡ **ದೇವರ ವಾಕ್ಯ!!**

**ಹೌದು! ಚೂಪಾದ ಮಚ್ಚುಗತ್ತಿಯಂತಿರುವ.......**
**..........ಸತ್ಯಗಳನ್ನು ಬೇರ್ಪಡಿಸುವದಕ್ಕಾಗಿ ತೆಗೆದುಕೊಂಡಿದ್ದಾರೆ!!**

ಈಗ ನಾವು ಈ ಕೊನೆಯ ಬೇರ್ಪಡುವಿಕೆಯ ಕೆಲಸದ ಕಾರ್ಯಗಳನ್ನು ಕುರಿತು ವಿವರವಾಗಿಕೆಳಗಿನ ವಾಕ್ಯದಲ್ಲಿ ಓದೋಣ –

## ಮತ್ತಾಯ 13:30

**"........ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು."**

**ಇವೆಲ್ಲದರ ಅರ್ಥವೇನು?** ಬನ್ನಿ ನೋಡೋಣ –



**.....ಇದು ಸತ್ಯಗಳನ್ನು ನಿರಾಕರಿಸಿ ತಪ್ಪಾದವುಗಳನ್ನು ಕಾಪಾಡಲು ನೋಡುವವರ ಮೇಲೆ ಬೀರುವ ಬೀರುವ ಪರಿಣಾಮವನ್ನು ಸೂಚಿಸುತ್ತದೆ.**


ಸತ್ಯವನ್ನು ಸಾರುವಾಗ, ಯಾರೆಲ್ಲಾ ಸತ್ಯಗಳನ್ನು ತಿರಸ್ಕರಿಸುವ ಮತ್ತು ತಮ್ಮದೇ ಆದ ತಪ್ಪುಗಳನ್ನು ಕಾಪಾಡಿಕೊಳ್ಳಲು ಬಯಸುವವರ ಮೇಲೆ ಇದೊಂದು ಪರಿಣಾಮದ ಸೂಚನೆಯಾಗಿದೆ!



**ಅವರು ಗುಂಪಾಗಿ ಸೇರಿಕೊಂಡು ತಪ್ಪುಗಳು ಮತ್ತು ಸುಳ್ಳು ಬೋಧನೆಗಳ ಮೇಲೆ ತಮಗಿರುವ ನಂಬಿಕೆ ಯನ್ನು ಎತ್ತಿಹಿಡಿಯುತ್ತಾರೆ ಮತ್ತು ಅದನ್ನು ಬಲಪಡಿಸು ತ್ತಾರೆ**



ಉದಾಹಣೆಗಾಗಿ –




ಈ "ಗಂಟು ಕಟ್ಟು"ಗಳೇ ಈ ದಿನಗಳಲ್ಲಿ ಬೆಳೆಯುತ್ತಿರುವ ವಿಭಾಗಗಳಾಗಿವೆ !

**ಕ್ರೈಸ್ತರಲ್ಲಿ ಎಷ್ಟು ವಿಭಾಗಗಳಿವೆ ಎಂದು ಗಮನಿಸಿದ್ದೀರಾ?**

ಕ್ರೈಸ್ತರಲ್ಲಿ **750** ವಿಭಾಗಗಳಿವೆ ಎಂದು ಹೇಳಲಾಗುತ್ತದೆ. ಮತ್ತು ಪ್ರತಿದಿನ ಅವು ಹೆಚ್ಚಾಗುತ್ತಲೇ ಇವೆ!

**ಇದು ನಮ್ಮ ಕಾಲದ ಒಂದು ವಿಶೇಷವಾದ ಲಕ್ಷಣವಾಗಿದೆ ನಿಜವಾಗಿಯೂ**

## ಇವುಗಳು..... "ಗಂಟು ಕಟ್ಟೆ"ಗಳಾಗಿವೆ!!

ಈ "ಗಂಟು ಕಟ್ಟೆ'ಗಳ "ಬಂಧನ'ವು ದಿನೇ ದಿನೇ ಗಟ್ಟಿಯಾಗುತ್ತಲೇ ಇವೆ, ಏಕೆಂದರೆ ಇದರ ಸಂಖ್ಯೆಯು ಪ್ರತಿದಿನವೂ ಹೆಚ್ಚಾಗುತ್ತಿವೆ. ಈ "ಗಂಟು ಕಟ್ಟೆ' ಅಥವಾ ಸಭೆಗಳಿಂದ ಒಬ್ಬ ವ್ಯಕ್ತಿಯು ಬಿಡಿಸಿಕೊಳ್ಳಲು ಬಹಳ ಕಷ್ಟಕರವಾಗಿದೆ ಏಕೆಂದರೆ ಪ್ರತ್ಯೇಕವಾದ ಸತ್ಯವೇದ ಅಭ್ಯಾಸ ಮಾಡಿ ಸ್ವತಂತ್ರವಾಗಿ ವ್ಯಕ್ತಪಡಿಸುವುದಕ್ಕೆ ಅಧಿಕವಾದ ನಿರ್ಬಂಧನೆಗಳನ್ನು ಹೇಳಲಾಗುತ್ತದೆ.

**ಉದಾ:** ಒಂದು ವೇಳೆ ನೀವು ಸಭೆ ಅಥವಾ ಬೋಧಕರಿಗೆ ತಿಳಿಸದೆ ಸತ್ಯವೇದ ಅಭ್ಯಾಸ ತರಗತಿಗೆ ಹೋದರೆ ನಿಮ್ಮನ್ನು ಹೀಗೆ ಪ್ರಶ್ನಿಸಲಾಗುವದು– "ಸಭೆಯ ಅನುಮತಿಯಿಲ್ಲದೆ ನೀವು ಹೇಗೆ ಸತ್ಯವೇದದ ಅಭ್ಯಾಸ ತರಗತಿಗೆ ಹೋದಿರಿ?"

**"ಅದನ್ನು ಸುಡುವದಕ್ಕೆ"**

ಇದು ಯೆಹೂದ್ಯರ ಸುಗ್ಗೀಕಾಲದಲ್ಲಿ ಈ ದೊಡ್ಡ ತಪ್ಪಾದ ವ್ಯವಸ್ಥೆ ಮತ್ತು ಸುಳ್ಳು ಬೋಧನೆಗಳನ್ನು ನಾಶ
ಮಾಡುವುದಕ್ಕೆ ಇರುವ ದೇವರ ನ್ಯಾಯತೀರ್ಪನ್ನು ಸೂಚಿಸುತ್ತದೆ.

**ಇದು ಸುವಾರ್ತಾ ಯುಗದ ವಿಶೇಷವಾದ ಲಕ್ಷಣವಾಗಿದೆ!**

**ಆದರೆ ಅದಕ್ಕೆ ಮುಂಚೆ ಈ ಗೋಧಿ ವರ್ಗಕ್ಕೆ ಏನಾಗುತ್ತದೆ?**

ಬನ್ನಿ ನೋಡೋಣ –

**"ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ"**

ಇದು ಕ್ರೈಸ್ತರಿಂದ ಹೇಗೆ "ಗೋಧಿ" ವರ್ಗದವರು ಸತ್ಯವೇದದ ಸತ್ಯಗಳನ್ನು ಪ್ರಖ್ಯಾತ ಪಡಿಸುವದರ ಮೂಲಕ ಈ ತಪ್ಪಾದ
"ಹೊಲದಿಂದ" ಹೊರಕ್ಕೆ ತೆಗೆಯಲ್ಪಡುತ್ತಾರೆಂಬುದನ್ನು ಸೂಚಿಸುತ್ತದೆ!

ಇದು ಕತ್ತರಿಸುವದಕ್ಕೆ ಮತ್ತು ಬೇರ್ಪಡಿಸುವದಕ್ಕೆ
ಇರುವ ಮಚ್ಚುಗತ್ತಿ(ಕುಡುಗೋಲು)ಗಳಾಗಿ ಮಾರ್ಪಡುತ್ತದೆ!

ಇಲ್ಲಿ "ಕಣಜ" ಎಂದರೆ ಗೋಧಿಯು "ಪಕ್ವವಾಗುವದಕ್ಕೆ(ಹಣ್ಣಾಗುವದಕ್ಕೆ) ಇರುವ ಸ್ಥಳ ಅಥವಾ ಸ್ಥಿತಿಯನ್ನು ಸೂಚಿಸುತ್ತದೆ.

ಇಲ್ಲಿ ಈ ಸಂಕೇತವು ಕರ್ತನೊಂದಿಗೆ ಒಂದಾಗಿರುವದಕ್ಕೆ ಸಹೋದರ ಸಹೋದರಿಯರು ಸತ್ಯವಾಕ್ಯವನ್ನು ಕೇಳುವದಕ್ಕೆ ಒಟ್ಟುಗೂಡುವುದು ಮತ್ತು ಒಂದೇ ನಿಜವಾದ ಸಭೆಯಾಗುವದಕ್ಕೆ ಒಂದು ಸೇರುವುದನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ವಿವರಿಸುವುದನ್ನು ಕುರಿತು ಓದುತ್ತೇವೆ –

## 1 ತಿಮೊಥೆಯನಿಗೆ 3:15

**"....ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ; ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ"**

"ಗೋಧಿ"ಎರಡು ಗುಣಲಕ್ಷಣ ಅಥವಾ ವರ್ಗವಾಗಿ ಬೆಳವಣಿಗೆಯಾಗುತ್ತದೆ.

ಪರಿಪೂರ್ಣವಾದ "ಹಣ್ಣು' ಅಂದರೆ ಮಗನ "ಸ್ವರೂಪ"ದಲ್ಲಿರುವವರು ಚಿಕ್ಕ ಹಿಂಡಾಗಿ ಮಾರ್ಪಡುವರು **(ಲೂಕ 12:32)**

ಅಪರಿಪೂರ್ಣವಾದ "ಹಣ್ಣು" ಅಥವಾ ಯಾರು ಅದರಲ್ಲಿ ಕೊರತೆಯುಳ್ಳವರಾಗಿರುವರೋ ಅವರು –

ಮಹಾ ಸಮೂಹದಲ್ಲಿ ಸೇರುವರು **(ಪ್ರಕಟನೆ 7:9)**

**ಇದು ಮೊದಲ ಎರಡೂ ಸುಗ್ಗಿಯು "ಸಭೆ" ಅಥವಾ "ಮದುಮಗಳು" ವರ್ಗದವರ**
**ಅವಯವ ಆರಿಸಲ್ಪಡುವಿಕೆಯ ಕಾಲವಾಗಿದೆ**

"ಅತ್ಯಂತ ವಿಶೇಷ ರಕ್ಷಣೆ"ಯಾಗಿದೆ **(ಇಬ್ರಿಯ 2:3,4)** ಮತ್ತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

## ರೋಮಾಪುರದವರಿಗೆ 2:9,10

**"ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ (ಅನ್ಯರಿಗೆ) ಸಹ....."**

ಈಗ ನಾವು ಸತ್ಯವೇದದಲ್ಲಿರುವ ಕೊನೆಯ ಸುಗ್ಗೀಕಾಲವನ್ನು ಕುರಿತು ನೋಡೋಣ –

# ಸಾವಿರ ವರ್ಷಗಳ ಯುಗದ ಸುಗ್ಗೀಕಾಲ

ಇಲ್ಲಿ ಹೊಲವೆಂದರೆ ಇಡೀ ಮನುಷ್ಯಜಾತಿಯನ್ನು ಸೂಚಿಸುತ್ತದೆ
ನಾವು ಗಮನಿಸಬೇಕಾದದ್ದೇನೆಂದರೆ ಕಳೆದ (ಮೊದಲ) ಎರಡೂ "ಸುಗ್ಗೀಯಲ್ಲಿ"
ಹಾಳಾದದ್ದು (ಪ್ರಯೋಜನವಿಲ್ಲದ್ದು) ಇಲ್ಲಿ ಕೊಯ್ಲು ಮಾಡಲಾಗುತ್ತದೆ.



...."**ಹೊಟ್ಟು**"– ಯೇಸುವನ್ನು ತಿರಸ್ಕರಿಸಿದ ಇಸ್ರಾಯೇಲ್ ದೇಶ.

... "**ಹಣಜಿ**" – ಸತ್ಯವನ್ನು ತಿರಸ್ಕರಿಸಿ ಪಾರಂಪರ್ಯ ತಪ್ಪುಗಳನ್ನು ಮತ್ತು ಸುಳ್ಳು
ಬೋಧನೆಗಳನ್ನು ಹೆಚ್ಚು ಇಷ್ಟ ಪಡುವ, ಹೆಸರಿಗೆ ಮಾತ್ರಯಿರುವ ಕ್ರೈಸ್ತರು
ಈ "ಸುಗ್ಗಿ'ಯಲ್ಲಿ ಪಾಲುಗೊಳ್ಳುವರು ಏಕೆಂದರೆ ಈ ಲೋಕದ ಎಲ್ಲಾ ಮನುಷ್ಯ
ಜಾತಿಯನ್ನು ಸತ್ತವರಿಂದ ಪುನರುತ್ಥಾನದಲ್ಲಿ ಎಬ್ಬಿಸುವಾಗ
ಇವರನ್ನೂ ಸಹ ಬದುಕಿಸಲಾಗುವದು.

**ಈ "ಸುಗ್ಗಿ"ಯು "ಕುರಿಗಳನ್ನು" ಮತ್ತು "ಆಡುಗಳನ್ನು" ಬೇರ್ಪಡಿಸುವದನ್ನು ಸೂಚಿಸುತ್ತದೆ.ಇದರ ಅರ್ಥವೇನು?**

ಈ ಸುಗ್ಗಿಯ ವಿವರಗಳನ್ನು ಕುರಿತು ಕೆಳಗಿನ
ವಾಕ್ಯದಲ್ಲಿ ಓದೋಣ –

## ಮತ್ತಾಯ 25:31-46

"ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆಮಾಡುವ ಪ್ರಕಾರ ಆತನು ಅವರನ್ನು ಬೇರೆಬೇರೆಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು. ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ- ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ; ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ;ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. ಅದಕ್ಕೆ ನೀತಿವಂತರು- ಸ್ವಾಮೀ, ಯಾವಾಗ ನೀನು ಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? ಯಾವಾಗ ನೀನು  ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? ಯಾವಾಗ ನೀನುರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು. ಅದಕ್ಕೆ ಅರಸನು - ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ-ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. ನಾನು ಹಸಿದಿದ್ದೆನು, ನೀವು ನನಗೆ ಊಟಕ್ಕೆ ಕೊಡಲಿಲ್ಲ; ನಾನು ಬಾಯಾರಿದ್ದೆನು, ನೀವು ನನಗೆ ಕುಡಿಯುವದಕ್ಕೆ ಕೊಡಲಿಲ್ಲ; ಪರದೇಶಿಯಾಗಿದ್ದೆನು, ನೀವು ನನ್ನನ್ನು ಸೇರಿಸಿಕೊಳ್ಳಲಿಲ್ಲ; ಬಟ್ಟೆಯಿಲ್ಲದವನಾಗಿದ್ದೆನು, ನೀವು ನನಗೆ  ಉಡುವದಕ್ಕೆ ಕೊಡಲಿಲ್ಲ; ರೋಗದಲ್ಲಿ ಬಿದ್ದಿದ್ದೆನು, ಸೆರೆಮನೆಯಲ್ಲಿದ್ದೆನು, ನೀವು ನನ್ನನ್ನು ಆರೈಕೆಮಾಡುವದಕ್ಕೆ ಬರಲಿಲ್ಲವೆಂದು ಹೇಳುವನು. ಅದಕ್ಕೆ ಅವರು ಸಹ- ಸ್ವಾಮೀ, ಯಾವಾಗ ನೀನು ಹಸಿದದ್ದನ್ನೂ ನೀನು ಬಾಯಾರಿದ್ದನ್ನೂ ನೀನು ಪರದೇಶಿಯಾದದ್ದನ್ನೂ ಬಟ್ಟೆಯಿಲ್ಲದವನಾಗಿದ್ದದ್ದನ್ನೂ ರೋಗದಲ್ಲಿ ಬಿದ್ದದ್ದನ್ನೂ ಸೆರೆಮನೆಯಲ್ಲಿದ್ದದ್ದನ್ನೂ ಕಂಡು ನಿನಗೆ ಉಪಚಾರಮಾಡದೆ ಹೋದೆವು? ಅನ್ನುವರು. ಆಗ ಆತನು- ನೀವು ಈ ಕೇವಲ ಅಲ್ಪನಾದವರಲ್ಲಿ ಒಬ್ಬನಿಗೆ ಏನೇನು ಮಾಡದೆ ಹೋದಿರೋ ಅದನ್ನು ನನಗೂ ಮಾಡದೆ ಹೋದಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು."

ಇದು 1000 ವರ್ಷಗಳ ನ್ಯಾಯತೀರ್ಪಿನದಿನ –
ಸಹಸ್ರ ವರ್ಷದ ಯುಗದಲ್ಲಿ ನಡೆಯುವ ಅತಿ ದೊಡ್ಡ ಕೆಲಸವನ್ನು ಕುರಿತು ಯೇಸು ಸಾಮ್ಯರೂಪವಾಗಿ ಹೇಳಿದ್ದಾರೆ!

ವಾಕ್ಯ **31** ಮತ್ತು **32**ರಲ್ಲಿ ನ್ಯಾಯ ತೀರ್ಪಿನ ಮಹಾಸಿಂಹಾಸನ ಮತ್ತು ಅದರ ಕೆಲಸಗಳನ್ನು ಮನುಷ್ಯನಿಗಾಗಿ ದೇವರ ದೈವೀಕ ಯೋಜನೆಯನ್ನು ಕುರಿತು ಈ ಮೂರನೆಯ ಮತ್ತು ಕೊನೆಯ "ಸುಗ್ಗಿ"ಯಲ್ಲಿ ವರ್ಣಿಸಲಾಗಿದೆ.

**'ಕುರಿಗಳು' ಮತ್ತು 'ಆಡುಗಳು' ಈ ಸಂಕೇತಗಳ ಅರ್ಥವೇನು?**



**"ಕುರಿಗಳು"**

ಈ ಸಂಕೇತವು ಆ ಯುಗದಲ್ಲಿ ಕರ್ತನ ಮೂಲಕ ಎಲ್ಲಾ ಮನುಷ್ಯಜಾತಿಯ "**ಕಣ್ಣುಗಳು ಮತ್ತು ಕಿವಿಗಳ ಅರಿವು**" ತೆರೆದಾಗ ಅದರಲ್ಲಿನ ಒಂದು ವರ್ಗದ ಗುಣಲಕ್ಷಣವನ್ನು ಸೂಚಿಸುತ್ತದೆ.

(ಯೆಶಾಯ 29:18)

"ಆ ದಿನದಲ್ಲಿ ಈ ವರ್ಗದವರು ತಮ್ಮ ಪಾಪಗಳಿಂದ ಮಾನಸಾಂತರ ಹೊಂದುವರು ಮತ್ತು..... ವಿಧೇಯರಾಗುವರು ಮತ್ತು..... ಧೀನಸ್ವಭಾವದವರಾಗಿರುವರು.



**"ಆಡುಗಳು"**

ಈ ಸಂಕೇತವು ಮನುಷ್ಯ ಜಾತಿಯಲ್ಲಿ ಇನ್ನೊಂದು ಸ್ವಭಾವದವರನ್ನು ಸೂಚಿಸುತ್ತದೆ. ಇವರು ದೇವರ ಕೃಪೆ ಮತ್ತು ದಯೆಯಿಂದ ಅನೇಕ ಭಾರಿ ಅವಕಾಶಗಳನ್ನು ಹೊಂದಿದರೂ, ಮನಸಾಂತರ ಹೊಂದುವುದಿಲ್ಲ ಮತ್ತು ತಮ್ಮನ್ನು ಹಠವಾದಿಗಳೆಂದುತೋರಿಸಿಕೊಂಡು

ಸ್ವೇಚ್ಛೆಯಿಂದ ಅವಿಧೇಯರಾಗುವರು ಮತ್ತು ತಮ್ಮ ಪಾಪಮಾರ್ಗವನ್ನು ಬಿಡದೆ ತಮ್ಮ ಸ್ವಾರ್ಥತೆಯ ಕೆಲಸಗಳಲ್ಲಿ ಮುಂದುವರಿಯುವರು ಎಂದು ಕೆಳಗಿನ ವಾಕ್ಯದಲ್ಲಿ ಈ ವರ್ಗದವರನ್ನು ಕುರಿತು ಓದುತ್ತೇವೆ –

**ಯೆಶಾಯ 26:10**

**" ದುಷ್ಟರನ್ನು ಕರುಣಿಸಿದರೂ ಅವರು ಧರ್ಮಜ್ಞಾನವನ್ನು ಪಡೆಯರು; ಯೆಹೋವನ ಮಹಿಮೆಯನ್ನು ಲಕ್ಷಿಸದೆ ಯಥಾರ್ಥವಂತರ ದೇಶದಲ್ಲಿಯೂ ಅನ್ಯಾಯವನ್ನಾಚರಿಸುವರು."**

ಈ ಎರಡು ಗುಣಲಕ್ಷಣಗಳು ವ್ಯಕ್ತವಾಗುವ ಕಾಲಾವಧಿಯಲ್ಲಿ ಈ ಲೋಕಕ್ಕೆ ನ್ಯಾಯ ವಿಚಾರಣೆ ಉಂಟಾಗುವದು.

ಹೌದು! ಈ "ನ್ಯಾಯವಿಚಾರಣೆಯ ದಿನ'ವನ್ನು ಕುರಿತು ಹೇಳುವುದನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 17:31**

**"ಯಾಕೆಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ...."**

ಈ ಕಾಲದಲ್ಲಿ ಭೂನಿವಾಸಿಗಳನ್ನು "ನೀತಿಯಿಂದ" ನ್ಯಾಯಕಾರ್ಯಗಳನ್ನು ನಡೆಸುವನು **(ಯೆಶಾಯ 26:9)**

**ಈ ಕೊನೆಯ 'ಸುಗ್ಗೀ ಕಾಲದಲ್ಲಿ' ಬೇರ್ಪಡಿಸುವ ವಿಧಾನವನ್ನು ಕುರಿತು ತಿಳಿದು ಕೊಂಡ ನಂತರ ನಮಗೆ ನ್ಯಾಯವಿಚಾರಣೆ ದಿನ ಮತ್ತು ಅದು ಹೇಗಿರುತ್ತದೆ ಎಂದು ಸ್ಪಷ್ಟವಾಗಿ ಅರ್ಥವಾಗಿದೆ.......!!**

ಏಕೆಂದರೆ ಈ ನ್ಯಾಯವಿಚಾರಣೆಯ ದಿನದಲ್ಲಿ ಯಾರ್ಯಾರು ಜೀವಕ್ಕೆ **"ಅರ್ಹರು" ಮತ್ತು ಯಾರ್ಯಾರು....... "ಅರ್ಹರಲ್ಲದವರು"** ಎಂದು ಗೊತ್ತಾಗುತ್ತದೆ.

**ಇದನ್ನೇ ಇಲ್ಲಿ "ಕುರಿಗಳು" ಮತ್ತು "ಆಡುಗಳು" ಎಂದು ಸೂಚಿಸಲಾಗಿದೆ.**

ಈಗ ನಾವು ಈ "ಸುಗ್ಗೀ" ಅಥವಾ "ನ್ಯಾಯವಿಚಾರಣೆಯ ದಿನ"ದ ವಿಧಾನವನ್ನು ಕುರಿತ ವಾಕ್ಯಗಳನ್ನು ಅಭ್ಯಾಸ ಮಾಡೋಣ –

## ಮತ್ತಾಯ 25:35-39

**"ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. ಅದಕ್ಕೆ ನೀತಿವಂತರು– ಸ್ವಾಮೀ, ಯಾವಾಗ ನೀನುಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? ಯಾವಾಗನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು."**

### ಈ ವಾಕ್ಯದ ಅರ್ಥವೇನು?

ಇದರ ಅರ್ಥವನ್ನು ನೋಡುವದಕ್ಕೆ ಮೊದಲು ಇದೇ ವಿಷಯವನ್ನು ಕುರಿತು ನಾವು ಇನ್ನೊಂದು ವಾಕ್ಯದಲ್ಲಿ ಸೂಚಿಸಿರುವದನ್ನು ನೋಡೋಣ –

## ಪ್ರಕಟನೆ 20:12

**"ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು."**

ನ್ಯಾಯ ತೀರ್ಪಿಗಾಗಿ ವಿವರಿಸಿರುವ ಈ "ಕೃತ್ಯಗಳನ್ನು" ಕುರಿತು **ಮತ್ತಾಯ 25:35–39**ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಆದರೆ ಈ "ಕೃತ್ಯ'ಗಳ ಅರ್ಥಗಳನ್ನು ಕುರಿತು ನೋಡುವದಕ್ಕೆ ಮೊದಲು ಈ ವಾಕ್ಯವನ್ನು ಅರ್ಥಮಾಡಿಕೊಳ್ಳೋಣ.

ನಾವು ನೆನಪಿನಲ್ಲಿಡಬೇಕಾದದ್ದು ಏನೆಂದರೆ ಈ ವಾಕ್ಯವನ್ನು ರೋಮನ್ ಕಥೋಲಿಕ್‌ನವರು ನೇರವಾದ ಭಾಷೆಯೆಂದು ಪರಿಗಣಿಸಿ ಒಬ್ಬ ವ್ಯಕ್ತಿ ಮರಣ ಹೊಂದಿದ ನಂತರ ದೇವರ ಸಿಂಹಾಸನದ ಮುಂದೆ "ತಕ್ಷಣ" ನ್ಯಾಯತೀರ್ಪು ಉಂಟಾಗುತ್ತದೆ. ಇಲ್ಲಿ ತೆರೆಯಲ್ಪಟ್ಟ "ಪುಸ್ತಕಗಳು" ಒಬ್ಬ ವ್ಯಕ್ತಿಯ ಜೀವನ ಮತ್ತು ಆತನ ಕ್ರಿಯೆಗಳನೊಳಗೊಂಡ ಲೆಕ್ಕಗಳ ಪುಸ್ತಕಗಳಾಗಿವೆ ಅಂದುಕೊಂ ಡಿದ್ದಾರೆ !!

ಇದು ನಿಜನಾ? ಬನ್ನಿ ನೋಡೋಣ.....

ನಾವು ಕೆಳಗಿನ ವಾಕ್ಯದಲ್ಲಿರುವ ಮುಖ್ಯವಾದ ನಿಯಮವನ್ನು ಅನ್ವಯಿಸುವಾಗ –

**2 ತಿಮೊಥೆಯನಿಗೆ 2:15 - "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು."**

.......ನಮಗೆ ಮೊದಲು ಮನವರಿಕೆಯಾಗುವುದೇನೆಂದರೆ ಪ್ರಕಟನೆ ಪುಸ್ತಕವು ಸಂಪೂರ್ಣವಾಗಿ ಸಾಂಕೇತಿಕ ಭಾಷೆಯಲ್ಲಿದೆ!

ಹಾಗಿರುವಾಗ ಆ ವಾಕ್ಯದ ಸಾಂಕೇತಿಕ ಅರ್ಥ ಏನೆಂಬುದನ್ನು ನೋಡೋಣ –

**"ಸತ್ತವರು"**

ಇದು "**ಮಹಾ ಸಂಕಟಗಳ ಕಾಲ**"ದ **ಕೊನೆಯಲ್ಲಿ** ಬದುಕುಳಿದಿರುವ ಈ ಲೋಕದ ಎಲ್ಲಾ ಜನರನ್ನು ಸೂಚಿಸುತ್ತದೆ **(ಮತ್ತಾಯ 24:21, 22)**
ಇದರಿಂದ ಈ ಪ್ರಸ್ತುತ ಎರಡನೆಯ ಲೋಕ ಅಂತಿಮಗೊಳ್ಳುತ್ತದೆ.

ಇದನ್ನೇ ಯೇಸು.... **"ಸತ್ತವರು"** ಎಂದು ಸೂಚಿಸಿದ್ದಾನೆ **(ಲೂಕ 9:60)**



ಹೌದು! ಅನೇಕರಿಗೆ ಆಶ್ಚರ್ಯವಾದರೂ, ಎರಡನೆಯ ಲೋಕದ ಕೊನೆಯಲ್ಲಿ ಎಲ್ಲಾ ಮನುಷ್ಯ ಜಾತಿಯು ಕೊನೆಯಾಗಬೇಕೆಂದೇನು ಇಲ್ಲ ಆದರೆ ಅನೇಕರು **"ಬದುಕುಳಿಯುವರು"** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜೆಕರ್ಯ 14:16**

**"ಅನಂತರ ಯೆರೂಸಲೇಮಿನ ಮೇಲೆ ಬಿದ್ದ ಸಕಲ ಜನಾಂಗಗಳಲ್ಲಿ ಉಳಿದವರೆಲ್ಲರೂ ಸೇನಾಧೀಶ್ವರ ಯೆಹೋವನೆಂಬ ರಾಜಾಧಿರಾಜನನ್ನು ಆರಾಧಿಸುವದಕ್ಕೂ ಪರ್ಣಶಾಲೆಗಳ ಹಬ್ಬವನ್ನು ಆಚರಿಸುವದಕ್ಕೂ ಪ್ರತಿವರ್ಷವೂ ಹೊರಟುಬರುವರು."**

**ನೀವಿದನ್ನು ನೋಡಿದಿರಾ? ಇದು ಸಮಂಜಸವಾಗಿ ಇದೆಯಲ್ಲವೇ??**

ಈಗ ನಾವು ಪ್ರಕಟನೆ 20:12ರಲ್ಲಿರುವ ಅರ್ಥವನ್ನು ನೋಡೋಣ –

**"ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು."**




ಇದು ಒಂದು ಸಂಕೇತವಾಗಿದೆ ಅದೇನೆಂದರೆ, ಲೋಕದ ನ್ಯಾಯ ತೀರ್ಪಿನ ವಿಧಾನವು ಆರಂಭವಾಗಿದೆ ಮತ್ತು ಅದು ಮುಂದುವರೆಯುತ್ತದೆ.

ಹೌದು! ಈ ಲೋಕದ ನ್ಯಾಯತೀರ್ಪಿನ ದಿನ ಆರಂಭವಾಗಿರುತ್ತದೆ!

ನೀವು ಎಂದಾದರು ನ್ಯಾಯಾಲಯಕ್ಕೆ ಭೇಟಿ ಮಾಡಿದ್ದೀರಾ ಮತ್ತು ನ್ಯಾಯಾಧೀಶನು ನ್ಯಾಯಾಲಯದ ಕೊಠಡಿಯೊಳಗೆ ಪ್ರವೇಶಿಸಿ ನ್ಯಾಯ ವಿಚರಣೆ ಆರಂಭಿಸುವದಕ್ಕೆ ಮುಂಚೆ ಎಲ್ಲರೂ ಎದ್ದು ನಿಂತುಕೊಳ್ಳಲು ಹೇಳಲಾಗುತ್ತದೆಯಲ್ಲವೇ?

ಹೌದು! ಇದು ಲೋಕದ ಎಲ್ಲಾ ಮನುಷ್ಯಜಾತಿಗೆ ನ್ಯಾಯವಿಚಾರಣೆಯ ಆರಂಭವನ್ನು ಸೂಚಿಸುತ್ತದೆ.




**"ಪುಸ್ತಕಗಳು"**

ಇದು **"ಶಾಸ್ತ್ರದ(ಪುಸ್ತಕ)"** (**ಯೆಶಾಯ 29:18**) ಯೆಹೋವನ ಶಾಸ್ತ್ರದಲ್ಲಿ (**ಯೆಶಾಯ 34:16**) ಅಂದರೆ **ಸತ್ಯವೇದ ಮತ್ತು** ಅದರಲ್ಲಿರುವ 66

**ಪುಸ್ತಕಗಳನ್ನು ಸೂಚಿಸುತ್ತದೆ!**

ಹೌದು! **ಈ “ಶಾಸ್ತ್ರದ(ಪುಸ್ತಕವು)”** ದೇವರ ವಾಕ್ಯಗಳಾದ ಅರವತ್ತಾರು ಪುಸ್ತಕಗಳನ್ನು ಸೂಚಿಸುತ್ತದೆ!

**“ತೆರೆಯಲ್ಪಟ್ಟವು”**



ಇದು **“ಬೀಗ ಹಾಕಲ್ಪಟ್ಟ”** ಸ್ಥಿತಿಯಲ್ಲಿರುವ ಸತ್ಯವೇದವು ಈಗ ಅಗೋಚರ ಭಾಷೆಯಲ್ಲಿ, ಸಾಮ್ಯರೂಪ ಭಾಷೆಯಲ್ಲಿ ಮತ್ತು ಮಬ್ಬಾದ ಭಾಷೆಯಲ್ಲಿದೆ (**ಮತ್ತಾಯ** 13:13) ಆದರೆ ಆಗ ಯೆಹೋವನ ಮಹಿಮೆಯ ಜ್ಞಾನವು ಭೂಮಿಯಲ್ಲಿ ತುಂಬಿಕೊಂಡಾಗ ನಿಜವಾಗಿಯೂ ಸತ್ಯವೇದದ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ತಿಳುವಳಿಕೆಯ **“ಕಣ್ಣುಗಳು”** ತೆರೆಯಲ್ಪಡುವವು.

ಏಕೆಂದರೆ ದೇವರು **“ಎಲ್ಲಾ ಮನುಷ್ಯರ ಮೇಲೆ ತನ್ನ ಆತ್ಮವನ್ನು ಸುರಿಸುವನು.”**

**“ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು”**

ಇಲ್ಲಿ ಸೂಚಿಸಿರುವ ಜೀವಬಾಧ್ಯರ ಪಟ್ಟಿ ಎಂದರೆ ನ್ಯಾಯತೀರ್ಪಿನ ದಿನದಲ್ಲಿ ಜೀವಕ್ಕೆ ಯೋಗ್ಯರಾಗಿರುವವರೆಲ್ಲರ ದಾಖಲಾತಿಯ ಹೆಸರಿರುವದನ್ನು ಸೂಚಿಸುತ್ತದೆ. ಇದು ಯಾರ್ಯಾರು "ನಿತ್ಯಜೀವಕ್ಕೆ" ತಮ್ಮ ಅರ್ಹತೆಯನ್ನು ತೋರಿಸುತ್ತಾರೋ ಅವರೆಲ್ಲರ ಹೆಸರ ದಾಖಲಾತಿಯನ್ನು ಇಡುವದನ್ನು ಸೂಚಿಸುತ್ತದೆ.

ಇದು ಕರ್ತನಾದ ಯೇಸು ಸೂಚಿಸುವ ಹಾಗೆ ಈ ಸುವಾರ್ತಾ ಯುಗದಲ್ಲಿ ಸಭೆಯ ವರ್ಗದ ಅಂಗವಾಗಿ ಯಾರ್ಯಾರು ಅರ್ಹರೋ ಅವರ ಹೆಸರು ದಾಖಲಾಗಿ ಜೀವಬಾಧ್ಯರ ಪಟ್ಟಿಯಲ್ಲಿ ಇರುವುದನ್ನು ಸೂಚಿಸುತ್ತದೆ. ಇದನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಪ್ರಕಟನೆ 3:5

**“ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನುಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು.”**

ಇದಲ್ಲದೆ ನಾವು ಗಮನಿಸಬೇಕಾದದ್ದೇನೆಂದರೆ: ಅನೇಕರು ಅಂದುಕೊಂಡಿರುವಂತೆ “ತೆರೆಯಲ್ಪಟ್ಟವು” ಎಂಬ ಪದದ ಅರ್ಥ ಏನೆಂದರೆ ಆ ಕೆಲಸಗಳು ಆಗ ಮಾತ್ರ ಆರಂಭವಾಗಿರುವವು, ಅದು ಮೊದಲೇ ಆರಂಭವಾಗಿಲ್ಲ!!

**“ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು.”**

ಇದು ಸ್ಪಷ್ಟವಾಗಿ ನ್ಯಾಯತೀರ್ಪಿನ ವಿಧಾನವನ್ನು ಸೂಚಿಸುತ್ತದೆ ಮತ್ತು “ಆ ಪುಸ್ತಕದಲ್ಲಿ ಬರೆದಿದ್ದ ಸಂಗತಿಗಳನ್ನು.” ಅರ್ಥ ಮಾಡಿಕೊಂಡ ಮೇಲೆ ಅವರ ಕೃತ್ಯಗಳ ಆಧಾರದ ಮೇಲೆ ಅಥವಾ ದೇವರ ಸತ್ಯವಾಕ್ಯದ ಆಧಾರದ ಮೇಲೆ ಅವರನ್ನು ಪರೀಕ್ಷಿಸಲಾಗುವದು ಎಂದು ಬಹಳ ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಕೀರ್ತನೆ 96:13

**“ಆತನು ಬರುತ್ತಾನೆ; ಭೂನಿವಾಸಿಗಳಿಗೆ ನ್ಯಾಯತೀರಿಸಲಿಕ್ಕೆ ಬರುತ್ತಾನೆ. ಆತನು ಲೋಕಕ್ಕೆ ನೀತಿಗನುಸಾರವಾಗಿಯೂ ಜನಾಂಗಗಳಿಗೆ ಸತ್ಯತೆಯಿಂದಲೂ ನ್ಯಾಯತೀರಿಸುವನು.”**

**ಹೌದು! ಇಗೋ ಅಲ್ಲಿದೆ!!**

## ಮತ್ತು ಈಗ ಈ ‘ಕೃತ್ಯಗಳು’ ಎಂದರೇನು ?

ನಾವು ಮತ್ತೆ ಕೆಳಗಿನ ವಾಕ್ಯವನ್ನು ಓದೋಣ –

## ಮತ್ತಾಯ 25:35-39

**“ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. ಅದಕ್ಕೆ ನೀತಿವಂತರು– ಸ್ವಾಮೀ, ಯಾವಾಗ ನೀನುಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು?**

**ಯಾವಾಗನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು."**

ಹೌದು! ಆ "ಕೃತ್ಯಗಳು" ಇಲ್ಲಿವೆ.

**ಅವುಗಳ ಅರ್ಥವೇನು?**

ನೆನಪಿಡಿರಿ, ಅದು ನೇರವಾದ ಭಾಷೆಯಲ್ಲ ಆದರೆ...... ಅದು ಯೇಸುವಿನ ಸಾಮ್ಯರೂಪ ಭಾಷೆಯಾಗಿದೆ!

ಈಗ ನಾವು ಈ ಸಾಮ್ಯರೂಪ ಭಾಷೆಗಳ ಅರ್ಥಗಳನ್ನು ತಿಳಿಯೋಣ –

## ವಾಕ್ಯ 35..... ಹಸಿದಿದ್ದೆನು .... ಬಾಯಾರಿದ್ದೆನು

ನಿಶ್ಚಯವಾಗಿಯೂ ದೇವರ ರಾಜ್ಯದಲ್ಲಿ ಮತ್ತು ನ್ಯಾಯತೀರ್ಪಿನ ದಿನದಲ್ಲಿ ನಿಜವಾದ ಆಹಾರ ಮತ್ತು ನೀರಿಗೆ ಯಾವ ಕೊರತೆಯೂ ಇರುವುದಿಲ್ಲ!

ಆದ್ದರಿಂದ ಈ "ಹಸಿವು" ಮತ್ತು "ದಾಹವು" ಆತ್ಮೀಕ ಆಹಾರ ಮತ್ತು ಆತ್ಮೀಕ ನೀರಿಗಾಗಿ ಅಂದರೆ ಸತ್ಯವಾಕ್ಯಕ್ಕಾಗಿ ಕೊಡಲ್ಪಟ್ಟಿರುವ ಒಂದು ಸಾಂಕೇತಿಕ ಚಿತ್ರಣವಾಗಿದೆ ಎಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆರೆಮೀಯ 15:16** – **"ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು."**

**ಪ್ರಕಟನೆ 22:17** – **"ಬಾಯಾರಿದವನು ಬರಲಿ ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ'**

ಒಬ್ಬ ವ್ಯಕ್ತಿಯು ಒಂದು ವಿಷಯವನ್ನು ಕುರಿತು ಆಶ್ಚರ್ಯ ಮತ್ತು ಅದ್ಭುತದಿಂದ ಹೀಗೆ ಯೋಚಿಸಬಹುದು. ಅದೇನೆಂದರೆ ಈ ಲೋಕವು ತಾನಾಗಿಯೇ ಸತ್ಯವೇದದ ಜ್ಞಾನದಿಂದ ತುಂಬಿರುವಾಗ ಹೇಗೆ ದೇವರ ರಾಜ್ಯದಲ್ಲಿ ದೇವರ ವಾಕ್ಯವೆಂಬ "ಆಹಾರ" ಮತ್ತು "ನೀರು" ಇತರರಿಗೆ ಒದಗಿಸಲು ಸಾಧ್ಯ!



ಒಳ್ಳೆಯದು! ಇದಕ್ಕೆ ಉತ್ತರವೇನೆಂದರೆ ಆಗಲೂ ಸಹ ದೇವರು ಪ್ರತಿಯೊಬ್ಬನಿಗೂ ವ್ಯಕ್ತಿಗತವಾಗಿ ದೇವರನ್ನು ಹುಡುಕಲು ಮತ್ತು ಆ ಕೃತ್ಯಗಳನ್ನು ಮಾಡಲು ಅವಕಾಶಗಳನ್ನು ತೆರೆಯುವನು.

ಈ ಅತಿಶಯವಾದ ವಿಷಯಗಳನ್ನು ಕೆಳಗಿನ ವಾಕ್ಯವು ದೃಢಪಡಿಸುತ್ತದೆ –

**ಪ್ರಕಟನೆ 22:17**

**"ಆತ್ಮನೂ ಮದಲಗಿತ್ತಿಯೂ ಬಾ ಅನ್ನುತ್ತಾರೆ. ಕೇಳುವವನು – ಬಾ ಅನ್ನಲಿ"**

**ಹೌದು! ಯಾರು ಮಹಿಮೆಯಿಂದ ತುಂಬಿದ ಜೀವವುಳ್ಳ ವಾರ್ತೆಗಳನ್ನು "ಕೇಳುತ್ತಾರೋ" ಅವರಿಗೂ ಸಹ ಆ ಸತ್ಯವನ್ನು ಬೇರೆಯವರಿಗೆ ತಿಳಿಸುವ ದೈವೀಕ ಸೇವೆಗೆ ಆಹ್ವಾನಿಸಲಾಗುವದು!**

ನಂತರ ನಾವು ಕೆಳಗಿನ ವಾಕ್ಯದಲ್ಲಿ ಕೊಟ್ಟಿರುವ "ಕೆಲಸಗಳ" ವಿವರವನ್ನು ಕುರಿತು ನೋಡೋಣ –

**ವಾಕ್ಯ-35 "ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ"**

ಹೌದು! ಮನುಷ್ಯ ಜಾತಿಯಲ್ಲಿರುವ "ಕುರಿ' ವರ್ಗದವರು ಅತ್ಯಾಸಕ್ತಿಯಿಂದ ತುಂಬಿದವರಾಗಿ, ತಮ್ಮ ಹತ್ತಿರದವರು ಮತ್ತು ಬಂಧುಬಳಗದವರಿಗೆ ಮಾತ್ರವಲ್ಲದೆ..... ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ತಮಗೆ ಗೊತ್ತಿಲ್ಲದ ಅಥವಾ ತಮಗೆ ಸಂಬಂಧವೇಇಲ್ಲದ "ಅಪರಿಚಿತರಿಗೆ" ಈ ಪ್ರೀತಿಯ ಸೇವೆಯನ್ನು ಸಲ್ಲಿಸುವರು!!



ಹೌದು! ಅವರ ಪ್ರೀತಿಯ ಹೃದಯವು ಎಷ್ಟು ದೊಡ್ಡದಾಗಿದೆ ಎಂದರೆ ಅವರು ತಮ್ಮ ಕುಟುಂಬ ಮತ್ತು ಬಂಧುಬಳಗದವರಿಗೆ ಮಾತ್ರವಲ್ಲದೆ ಅವರಿಗೆ ಗೊತ್ತಿಲ್ಲದ "ಅಪರಿಚಿತರಿಗೆ" ಸಹ ಈ ಪ್ರೀತಿಯ ಸೇವೆಯನ್ನು ವ್ಯಾಪಿಸುತ್ತಾರೆ.

ಆಹ್, ಹೌದು! ಅವರ ದೈವೀಕ ಸತ್ಯದ ಸೇವೆಯನ್ನು ವಿಸ್ತಾರಗೊಳಿಸಿ ಧಾರಾಳವಾಗಿ ಎಲ್ಲರಿಗೂ ತಿಳಿಸುವರು.....

ಅವರನ್ನು ಅರಿಯದಿರುವ ಅಥವಾ ಅವರಿಗೆ ಸಂಬಂಧವಿಲ್ಲದವರಿಗೂ ಸಹ ತಿಳಿಸುವರು !

## ವಾಕ್ಯ - 36 "....ಬಟ್ಟೆಯಿಲ್ಲದವನಾಗಿದ್ದೆನು ನನಗೆ ಉಡುವದಕ್ಕೆ ಕೊಟ್ಟಿರಿ"

ಇದು ನಿಜವಾದ(ನೇರವಾದ) ಬಟ್ಟೆಯಿಲ್ಲದೆ ಇರುವುದಲ್ಲ...... ಏಕೆಂದರೆ ದೇವರ ರಾಜ್ಯದಲ್ಲಿ ನಿಶ್ಚಯವಾಗಿಯೂ ಬಟ್ಟೆಗೆ ಯಾವ ಕೊರತೆಯೂ ಇರುವುದಿಲ್ಲ!!!

**ಈ "ಬಟ್ಟೆಯಿಲ್ಲದೆ" ಇರುವುದೆಂದರೆ ಲೋಕದ ಮನುಷ್ಯ ಜಾತಿಯು ಪಾಪದ ನಗ್ನತೆಯಿಂದ ಹೊದಿಕೆಯಿಲ್ಲದ ಸ್ಥಿತಿಯನ್ನು ಸೂಚಿಸುತ್ತದೆ. ಈ ಮನುಷ್ಯಜಾತಿಗೆ ಯೇಸುವಿನ ಈಡು ಬಲಿಯ ತ್ಯಾಗವೆಂಬ "ಹೊದಿಕೆ" ಅವಶ್ಯವಾಗಿದೆ.**

**ಹೌದು! ಎಲ್ಲಾ ಹಿಂದುಗಳು, ಮುಸ್ಲಿಮರು, ಬುದ್ಧರು, ಅಥಿಯೆಸ್ಟರು, ಇತರರು ಎಚ್ಚೆತ್ತುಕೊಳ್ಳುವಾಗ ತಮ್ಮ ಪಾಪಗಳನ್ನು ಮರೆಮಾಡಿಕೊಳ್ಳಲು ಆಗ ಒಂದು ದೊಡ್ಡ ಅವಕಾಶಗಳಿರುವವು!!**

**ಆಹ್, ಹೌದು! ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವ ಇಬ್ಬರೂ ಬಟ್ಟೆಗಳನ್ನು ಧರಿಸಿಕೊಳ್ಳಲು ಕಾರಣವೇನೆಂದು ನಿಮಗೆ ನೆನಪಿದೆಯೇ??**

ಇಲ್ಲ! ಅವರ ಬೆತ್ತಲೆಯಾಗಿರುವ ಶರೀರವನ್ನು ಮರೆಮಾಡುವದಕ್ಕಲ್ಲ

.....ಆದರೆ ತಮ್ಮ ಪಾಪದ ನಗ್ನತೆಯನ್ನು ಮರೆ ಮಾಡಿಕೊಳ್ಳುವದಕ್ಕೆ ಇದ್ದ ಇಚ್ಛೆಯಿಂದ ಧರಿಸಿಕೊಂಡರು!!

ಅನೇಕರು ಪುನರುತ್ಥಾನದಲ್ಲಿ ಈ "ಬೆತ್ತಲೆತನ" ದಿಂದ ಹೊದಿಕೆ ಧರಿಸಿಕೊಳ್ಳಲು ಹುಡುಕುವರು, ಯೇಸು ಮತ್ತು ಕಲ್ವಾರಿ ಶಿಲುಬೆಯಲ್ಲಿ ಆತನು ಸುರಿಸಿದ ರಕ್ತವನ್ನು ಇವರಿಗೆ ತೋರಿಸುವುದರಲ್ಲಿ ಎಂತಹ ಭಾಗ್ಯ ಉಂಟಾಗುತ್ತದೆ.

**“.....ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ.....”**



ಮತ್ತೆ ಇದು ನಿಜವಾದ (ನೇರವಾದ ಭಾಷೆಯ) ರೋಗವಲ್ಲ ಏಕೆಂದರೆ ಆ ರಾಜ್ಯ ಮತ್ತು ಆ ರಾಜ್ಯದ ಸ್ಥಿತಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಯೆಶಾಯ 33:24**

**“ಚೀಯೋನಿನ ಯಾವ ನಿವಾಸಿಯೂ ತಾನು ಅಸ್ವಸ್ಥನು ಎಂದು ಹೇಳನು; ಅಲ್ಲಿಯ ಜನರ ಪಾಪವು ಪರಿಹಾರವಾಗುವದು.”**

ಇಲ್ಲ! ಇದು ನೇರವಾದ ರೋಗವಲ್ಲ ಆದರೆ ಕುಳಿಯಿಂದ (ಗೋರಿ) ತಿರಿಗಿ ಎಚ್ಚೆತ್ತು ಬರುವ ಜನರ “ಪಾಪದ ಪರಿಸ್ಥಿತಿ”ಯನ್ನು ಸೂಚಿಸುತ್ತದೆ – ಪಾಪವೆಂಬ ರೋಗ!

ಮತ್ತು “ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ” ಎಂದರೆ ಎಲ್ಲಾ ಮನುಷ್ಯ ಜಾತಿಗೆ ತಮ್ಮ ಪಾಪ "ಮಾರ್ಗ"ಗಳಿಂದ ಹೊರ ಬರುವದಕ್ಕೆ ಮಾರ್ಗದರ್ಶನ ನೀಡಿ, ಅವರನ್ನು ಪ್ರೋತ್ಸಾಹಿಸಿ, ಆಲೋಚನೆ ನೀಡಿ ಪ್ರೀತಿಯಿಂದ ನೋಡಿಕೊಳ್ಳುವದು ಮತ್ತು ಸೇವೆ ಮಾಡುವದನ್ನು ಸೂಚಿಸುತ್ತದೆ.

ನಿಜವಾಗಿಯೂ! ಆಗ “ಭೇಟಿ ನೀಡಿ” ಆರೈಕೆ ಮಾಡುವದಕ್ಕೆ ಅನೇಕ ಅವಕಾಶಗಳಿರುತ್ತದೆ!

**“....ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ.....”**

ಹೌದು! ಇದು ಕುಳಿ ಎಂಬ ಮಹಾ "ಸೆರೆಮನೆ"ಯಾಗಿದೆ – "ಹೇಡ್ಸ್/ ಶೀಯೋಲ್" ಮತ್ತು ನರಕ!


☞ ದೇವರ ರಾಜ್ಯದಲ್ಲಿನ ಸಮಯವನ್ನು ಕುರಿತು ನಾವು ಹೀಗೆ ಓದುತ್ತೇವೆ –

**"…….ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ."– (ಯೋಹಾನ 5:28)**

**ಹೌದು! ಇದು ಸಮಾಧಿಗಳಿಂದ – ಮರಣದಿಂದ ಎಚ್ಚೆತ್ತುಕೊಳ್ಳುವದಾಗಿದೆ!**

## 'ನನ್ನನ್ನು ನೋಡುವದಕ್ಕೆ ಬಂದಿರಿ' ಎಂದರೇನು ಅರ್ಥ?

ನಾವು ಹಿಂದಿನ ಪಾಠಗಳಲ್ಲಿ ನೋಡಿರುವುದೇನೆಂದರೆ,
ನಮ್ಮ ಆಲೋಚನೆ ಏನೆಂದರೆ…….
ನಮ್ಮ ಪ್ರಾರ್ಥನೆಗೆ ಉತ್ತರವಾಗಿ ಮರಣದಲ್ಲಿರುವವರು ಎಚ್ಚೆತ್ತುಕೊಳ್ಳುವರು.
ಇದರಿಂದ ದೇವರ ಮೇಲಿನ ನಂಬಿಕೆ ಹೆಚ್ಚಾಗುತ್ತದೆ ಮತ್ತು
ಉತ್ಸಾಹವುಳ್ಳವರಾಗುತ್ತೇವೆ! ಅನೇಕರು ಸತ್ತು ಹೋಗಿದ್ದಾರೆ ಆದರೆ ತಿರಿಗಿ ಬರಲಿ.



ಎಂದು ಅವರ ಕುಟುಂಬವಾಗಲಿ ಅವರ ಬಂದುಬಳಗವಾಗಲಿ ಇಚ್ಚಿಸುವುದೂ ಇಲ್ಲ ಅಥವಾ ಪ್ರಾರ್ಥನೆ ಮಾಡುವುದೂ ಇಲ್ಲ!

ಉದಾ: **ಅನಾಥರು, ಬೀದಿಮಕ್ಕಳು, ಬುದ್ಧಿಮಾಂದ್ಯರು, ಭಿಕ್ಷುಕರು ಇತರರು.**

ಸಮಾಧಿಯಿಂದ ಎಚ್ಚೆತ್ತುಕೊಳ್ಳುವ ಇಂಥವರನ್ನು ಕುರಿತು ಚಿಂತಿಸುವದಕ್ಕೂ.... ಪ್ರಾರ್ಥನೆ ಮಾಡುವದಕ್ಕೂ....
ಮತ್ತು ಸೇವೆ ಮಾಡುವದಕ್ಕೂ "ಕುರಿ" ವರ್ಗದಲ್ಲಿ ಅನೇಕ ಮಂದಿ ಇರುತ್ತಾರೆ.

ನಿಮ್ಮ ಮನೆ ಹತ್ತಿರ…… ಅಥವಾ ಪ್ರತಿದಿನ ನೀವು ಕೆಲಸಕ್ಕೆ ಹೋಗುವ ದಾರಿಯಲ್ಲಿ ಇಂಥಹ ತಿರುಕರು ಮತ್ತು ಭಿಕ್ಷುಕರು ಸ್ನಾನ ಮಾಡದೆ, ಕೈ ಬಿಟ್ಟ ಸ್ಥಿತಿಯಲ್ಲಿ ಇರುವುದನ್ನು ಗಮನಿಸಿದ್ದೀರಾ??

ಎಂದಾದರೂ ಅವರ ಹೆಸರು ಕೇಳಬೇಕು..... ಅಥವಾ ಅವರ ಕಥೆ(ಇತಿಹಾಸ) ಕೇಳಬೇಕೆಂದು ಯೋಚಿಸಿದ್ದೀರಾ??

**ಇದಕ್ಕೆ ಉತ್ತರ.... ಇಲ್ಲ!!**

ಆದರೆ ಆ ಮಹಾ ಸಮಯದಲ್ಲಿ..... ಮನುಷ್ಯಜಾತಿಯಲ್ಲಿನ ಆ "ಕುರಿ" ವರ್ಗದವರು ಅವರನ್ನು ಕುರಿತು ಚಿಂತಿಸಲು ಹುಡುಕುವರು, ಅವರು ಮರಣದಿಂದ ತಿರುಗಬೇಕೆಂದು ಪ್ರಾರ್ಥನೆ ಮಾಡುವರು ಮತ್ತು "ಸಮಾಧಿ"ಯೆಂಬ "ಸೆರೆಮನೆ"ಯಿಂದ ಅವರು ಪುನರುತ್ಥಾನ ಹೊಂದಿದಾಗ ಅವರಿಗೆ ಸೇವೆ ಮಾಡುವರು.

ಹೌದು! ರಾಜ್ಯದಲ್ಲಿ ಸಹ ಮಾನವರಿಗಾಗಿ ತೋರಿಸುವ ಪ್ರೀತಿ ಅದನ್ನು ಅತ್ಯಾಸಕ್ತಿಯಿಂದ ಮಾಡುವ ಸೇವೆಯ "ಕೆಲಸಗಳಾಗಿವೆ".

"ಕುರಿ" ವರ್ಗದವರು ತಮ್ಮ ಸಹ ಮಾನವರಿಗೆ ಸೇವೆ ಮಾಡಲು ಇರುವ ದೈವೀಕ ಕಟ್ಟಳೆಗಳನ್ನು ಅರಿತು ಎಲ್ಲಾ ಮಾರ್ಗ ಮತ್ತು ಸಾಧನಗಳನ್ನು ಅನುಸರಿಸುವರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಮಾರ್ಕ 12:29-31**

**"ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನುಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು ಎಂಬದೆ ಮೊದಲನೆಯ ಆಜ್ಞೆ; ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ; ಇವುಗಳಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರಕೊಟ್ಟನು."**

ಆದ್ದರಿಂದ ಈ "ಕುರಿ' ವರ್ಗದವರು ರಾಜನ "ಬಲಗಡೆಯಲ್ಲಿ" ಸೇರುವವರು **(ಮತ್ತಾಯ 25:33)** ಅಥವಾ ನೀತಿಯ ದಾರಿಯಲ್ಲಿ ಸೇರುವವರು ಮತ್ತು ಕೃಪೆಗೆ ಪಾತ್ರರಾಗುವವರು.

"ಆಡು" ವರ್ಗದವರು ರಾಜನ "ಎಡಗಡೆಯಲ್ಲಿ" ಸೇರುವವರು ಅಥವಾ ಅನೀತಿಯ ದಾರಿಯಲ್ಲಿ ಸೇರುವವರು ಮತ್ತು ಅವರು ಕೃಪೆಗೆ ಪಾತ್ರರಾಗುವುದಿಲ್ಲ **(ಯೆಶಾಯ 26:10)**





**ಇದು 1000 ವರ್ಷದವರೆಗೂ ಕ್ರಮೇಣವಾಗಿ ನಡೆಯುವ ವಿಧಾನವಾಗಿದೆ.**

ಮತ್ತು ಎಲ್ಲರಿಗೂ ದೇವರ ಕಡೆಗೆ ತಿರುಗಿಕೊಳ್ಳಲು ಮಾನಸಾಂತರ ಹೊಂದಲು ಮತ್ತು ತಿದ್ದಿಕೊಳ್ಳಲು ದೇವರಿಂದ ಅಧಿಕ ಕೃಪೆಯ ಕಾಲವನ್ನು ನೀಡಲಾಗುವದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 65:20

**"ಕೆಲವು ದಿವಸ ಮಾತ್ರ ಬದುಕತಕ್ಕ ಕೂಸಾಗಲಿ ಮುದುಕನಾಗಲಿ ಅಲ್ಲಿ ಇರುವುದಿಲ್ಲ; ಯುವಕನು ನೂರು ವರುಷದೊಳಗೆ ಸಾಯನು, ಪಾಪಿಷ್ಟನಿಗೂ ನೂರು ವರುಷದೊಳಗೆ ಶಾಪತಗಲದು."**

ಹೌದು! ಇದು ಅತ್ಯಧಿಕವಾದ **100** ವರ್ಷಗಳ ಪರೀಕ್ಷಣ ಕಾಲವನ್ನು ತೋರಿಸುತ್ತದೆ.

ಎಲ್ಲಾ ಮೊಂಡುತನವುಳ್ಳ ಪಾಪಿಗಳು 100 ವರ್ಷಗಳನ್ನು ದಾಟುವುದಿಲ್ಲ, ಆದರೆ ದೇವರಿಂದ "ಶಾಪವನ್ನು ಹೊಂದುವರು –

**ಅದೇ ಮರಣ.... ಎರಡನೆಯುಸಲ! (ರೋಮಾಪುರದವರಿಗೆ 6:23)**

ಈ ವರ್ಗದವರ ವಿವರಗಳನ್ನು ಕುರಿತು **ಪ್ರಕಟನೆ 21:8** ರಲ್ಲಿ ಓದುತ್ತೇವೆ.

ಆದ್ದರಿಂದ ಮೂರನೆಯ "ಸುಗ್ಗೀಕಾಲ"ವು ಕೊನೆಗೊಳ್ಳುವವು. ಮತ್ತು ಅಂತಿಮವಾಗಿ ನಾವು ಹೀಗೆ ಓದುತ್ತೇವೆ –

**ಮತ್ತಾಯ 25:34**

**"...... ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ;"**



ಹೌದು! "ಕುರಿ" ವರ್ಗದವರು ಈ ಭೂಮಿ "ರಾಜ್ಯ"ವನ್ನು ಹೊಂದುವರೆಂದು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಕೀರ್ತನೆ 37:29**

**"ನೀತಿವಂತರೋ ದೇಶವನ್ನು ಅನುಭವಿಸುವವರಾಗಿ ಅದರಲ್ಲಿ ಶಾಶ್ವತವಾಗಿ ವಾಸಿಸುವರು."**

.......ಮತ್ತು ನಿತ್ಯಜೀವವನ್ನು ಹೊಂದುವರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಮತ್ತಾಯ 25:46**

**"ನೀತಿವಂತರು ನಿತ್ಯಜೀವಕ್ಕೂ ಹೋಗುವರು."**

ಮತ್ತು "ಮೇಕೆ" ವರ್ಗದವರನ್ನು ಕುರಿತು ಹೀಗೆ ಓದುತ್ತೇವೆ –


**ಮತ್ತಾಯ 25:41**

**"ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ–ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ."**

**ಹೌದು! "ಮೇಕೆ" ವರ್ಗದವರ ನಿತ್ಯ ಬೆಂಕಿಯೊಳಕ್ಕೆ ಹೋಗುವರು.**

**ಇದನ್ನು "ನಿತ್ಯ ಶಿಕ್ಷೆ" ಎಂದು ವಾಕ್ಯ 4-6ರಲ್ಲಿ ವರ್ಣಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –**

**"ಇವರು ನಿತ್ಯಶಿಕ್ಷೆಗೂ ಹೋಗುವರು"**


**ಇದರ ಅರ್ಥವೇನು?**

ನಾವು ನೆನಪಿಡಬೇಕಾದದ್ದೇನೆಂದರೆ ಹೇಗೆ "ಮೇಕೆ"ಗಳು ಸಂಕೇತವಾಗಿದೆಯೋ ಹಾಗೆಯೇ ಈ "ನಿತ್ಯಬೆಂಕಿ" ಎಂದರೆ ನಾಶನದ ಸಂಕೇತವಾಗಿದೆ.

**ಇದು "ಹೊಟ್ಟು" ಮತ್ತು "ಹಣಜಿಯ" ವಿಷಯದಲ್ಲಿದಂತಿದೆ, ಆದರೆ ಇಲ್ಲಿ ವ್ಯತ್ಯಾಸವೇನೆಂದರೆ ಇದು ನಿತ್ಯವಾದದ್ದು ಮತ್ತು ಶಾಶ್ವತವಾದದ್ದು. ಆದರೆ ಮೊದಲ ಎರಡು ಸುಗ್ಗಿಯಲ್ಲಿರುವ "ಹೊಟ್ಟು" ಮತ್ತು "ಹಣಜಿ"ಯ ವಿಷಯದಲ್ಲಿ ಹಾಗಲ್ಲ.**


**ಹೌದು! ಇದು ಕೊನೆಯ ನ್ಯಾಯತೀರ್ಪಾಗಿದೆ ಮತ್ತು ಇಲ್ಲಿನ ನಾಶನವು ಶಾಶ್ವತವಾದದ್ದು ಇದೇ – ಎರಡನೆಯ ಮರಣ!**

**ಆದ್ದರಿಂದ ಮನುಷ್ಯನಿಗಾಗಿ ಇರುವ ದೇವರ ದೈವೀಕ ಯೋಜನೆಯಲ್ಲಿನ ಮೂರನೆಯ ಮತ್ತು ಕೊನೆಯ 'ಸುಗ್ಗೀಕಾಲವು' ಕೊನೆಗೊಳ್ಳುತ್ತದೆ.**


ಮತ್ತು ಒಂದು ಪರಿಪೂರ್ಣ ಜಾತಿಯ ಮನುಷ್ಯಕುಲವು ಜೀವದಲ್ಲಿ ಪ್ರವೇಶಿಸುವುದು.

ಈ ಪರಿಪೂರ್ಣ ಭೂಮಿಯು ಸದಾಕಾಲವು ಇರುವಂಥದಾಗಿದೆ!

ಆಮೆನ್



For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com